# ತಪೋವಾಣಿ

ಸಂಪುಟ 15 ಸಂಚಿಕೆ 1 | ಜನವರಿ 2018 | ರೂ.25


## ಅನಿಸಿಕೆಗಳು

### ಗುರೂಜಿ ಕೃಷ್ಣಾನಂದ

**ಅನು: ಚಂಪ**

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಏಪ್ರಿಲ್ 1997ರ ಸಂಚಿಕೆ)

ನಾನು ಇಪ್ಪತ್ತರ ಹರೆಯದಲ್ಲಿದ್ದಾಗ ಒಬ್ಬ ಅಧ್ಯಾತ್ಮ ಮುಖಂಡರನ್ನು ಭೇಟಿಯಾಗಿದ್ದೆ, ಅವರ ತತ್ವಜ್ಞಾನದ ಗ್ರಂಥಗಳು ಫ್ರೆಂಚ್ ಭಾಷೆಗೆ ಅನುವಾದವಾಗಿದ್ದವು, ಅವರಿಗೆ ಒಂದು ಡಝನ್ ಪರದೇಶಿ ಶಿಷ್ಯರಿದ್ದರು. ನಾನು ಅವರನ್ನು ಕೇಳಿದೆ, "ಆತ್ಮವೆಂದರೇನು?" ಅವರು ನನಗೆ ಹದಿನೆಂಟು ವ್ಯಾಖ್ಯಾನಗಳನ್ನು ನೀಡಿದರು ಹಾಗೂ ಬರ್ಗ್‌ಸನ್ ಅವರನ್ನು ಉದ್ಧರಿಸಿದರು. ನಾನು ದಡ್ಡ, ನನಗೇನೂ ಅರ್ಥವಾಗಲಿಲ್ಲ.

ಇಪ್ಪತ್ತು ವರ್ಷಗಳ ನಂತರ ನಾನು ಅಮರರವರನ್ನು ಭೇಟಿಯಾದೆ. ನಾನು ಅವರನ್ನು ಕೇಳಿದೆ, "ಆತ್ಮವೆಂದರೇನು?" ಅಮರರವರು ಆ ಕೂಡಲೆ ಉತ್ತರ ಕೊಡಲಿಲ್ಲ. ಕ್ಷಣಕಾಲ ಅವರು ನನ್ನನ್ನು ದಿಟ್ಟಿಸಿ ನೋಡಿ ನಂತರ ನನ್ನ ಪ್ರಶ್ನೆ ಕೇಳಿಸಲೇ ಇಲ್ಲವೇನೋ ಎಂಬಂತೆ ಇತರರೊಂದಿಗೆ ಮಾತಿನಲ್ಲಿ ಮುಳುಗಿದರು. ನಾನು ಅಲ್ಲಿಂದ ಹೊರಡುವ ಮೊದಲು ಅವರು ನನಗೊಂದು ಸರಳವಾದ ತಂತ್ರವನ್ನು ಕೊಟ್ಟು ಅದನ್ನು ಅಭ್ಯಾಸ ಮಾಡಲು ಹೇಳಿದರು.

ಹಲವಾರು ತಿಂಗಳ ನಂತರ, ಒಂದು ದಿನ ಅವರು ಕೊಟ್ಟ ತಂತ್ರವನ್ನು ಅಭ್ಯಾಸ ಮಾಡುತ್ತಿದ್ದಾಗ, ಏಕಾಏಕಿ ನಾನು ನನ್ನೊಳಗೆ ಒಂದು ಸಣ್ಣ ಆದರೆ ಬಹಳ ಉಜ್ವಲವಾದ ಸೂರ್ಯನನ್ನು ಕಂಡು ಪ್ರಜ್ಞೆ ತಪ್ಪಿದೆ. ಮರುದಿನ ಈ ಅನುಭವವನ್ನು ಅವರಿಗೆ ಹೇಳಿದಾಗ ಅಮರರವರು, "ಅದೇ ನಿನ್ನ ಆತ್ಮ!" ಎಂದು ಹೇಳಿದರು.

ಜ್ಞಾನೋದಯವಾದ ವ್ಯಕ್ತಿ ತಿಳಿದುಕೊಂಡಿರುತ್ತಾನೆ. ಒಬ್ಬ ಬುದ್ಧಿಜೀವಿ ಅಥವಾ ತತ್ವಜ್ಞಾನಿಯು ವಿಚಾರಮಾಡುತ್ತಾನೆ. ಅಮರರವರು ವೇದಗಳನ್ನು ಮತ್ತು ಉಪನಿಷತ್ತುಗಳನ್ನು ವಿವರಿಸಿ ಹೇಳಲಿಲ್ಲ. ಅವರು ನಮಗೆ ಎಂತಹ ಅದ್ಭುತ ತಂತ್ರಗಳನ್ನು ಕೊಟ್ಟರೆಂದರೆ ನಾವು ಯಾರೇ ಆದರೂ ಆ ಸತ್ಯಗಳನ್ನು ಅನುಭವಿಸಬಹುದಿತ್ತು.

ಇತ್ತೀಚೆಗೆ ಪೋಪ್‌ರು ಬೋಸ್ನಿಯಾಗೆ ಭೇಟಿ ನೀಡಿದ್ದನ್ನು ತಿಳಿದು ನನ್ನ ಮನಕಲಕಿತು. ಅವರ ವಯಸ್ಸಾದ ಕೃಶ ದೇಹ ಮತ್ತು ಗಂಭೀರವಾದ ಜೀವ ಬೆದರಿಕೆಯ (ಅವರು ತಲುಪುವ ಕೆಲವೇ ನಿಮಿಷಗಳ ಮೊದಲು ಪೋಲೀಸರು ಸೇತುವೆಯ ಕೆಳಗಿನಿಂದ ಸ್ಫೋಟಕಗಳನ್ನು ತೆಗೆದು ಹಾಕಿದರು) ನಡುವೆಯೂ ಅವರು ಅತ್ಯಂತ ಪ್ರಬಲವಾದ ಸಂದೇಶವನ್ನು ಕೊಟ್ಟರು: ಪ್ರೀತಿ; ಸಹಿಷ್ಣುತೆ.

ಇಂತಹ ಮಹತ್ತರ ಘಟನೆಗಳು ಯಾರ ಗಮನಕ್ಕೂ ಬರುವುದಿಲ್ಲ. ಮಾಧ್ಯಮಗಳು ಅವುಗಳನ್ನು ವರದಿ ಮಾಡಿದರೂ ಹೆಚ್ಚಿನ ಪ್ರಾಮುಖ್ಯತೆ ಕೊಡುವುದಿಲ್ಲ. ಇದು ವಿಷಾದಕರ.

ಒಬ್ಬ ಮಹಿಳೆಯು ಇತ್ತೀಚೆಗೆ ತಪೋನಗರಕ್ಕೆ ಮೊಟ್ಟಮೊದಲ ಬಾರಿಗೆ ಬಂದಿದ್ದರು. ಅವರು ನನ್ನನ್ನು ಭೇಟಿ ಮಾಡಿ ನಂತರ ಧ್ಯಾನ ಮಾಡಿದರು. ಆಕೆ ತೆರಳಿದ ನಂತರ, ತಾನು ಬಂದಾಗ ಉದ್ವಿಗ್ನಗೊಂಡಿದ್ದೆ, ಆದರೆ ಇಲ್ಲಿಂದ ಹೋಗುವಾಗ ಶಾಂತಿ ಮತ್ತು ಭರವಸೆಗಳು ತುಂಬಿದ್ದವು, ಅಲ್ಲದೆ ಅವು ಬಹು ದಿನಗಳ ಕಾಲ ನನ್ನಲ್ಲಿ ನೆಲೆಸಿದ್ದವು, ಎಂದು ನನಗೆ ಪತ್ರ ಬರೆದು ತಿಳಿಸಿದರು. ಆಕೆಯ ಸಮಸ್ಯೆಗಳು ಮಾಯವಾಗಿಲ್ಲ, ಆದರೂ ಅಕೆ ಅವುಗಳನ್ನು ಎದುರಿಸಬಲ್ಲರು ಹಾಗೂ ನಗಬಲ್ಲರು!

ಅದೇ ನಮ್ಮ ಕೆಲಸ, ಜನರು ಜೀವನವನ್ನು ತಮ್ಮ ಆಂತರಿಕ ಅಧ್ಯಾತ್ಮ ಶಕ್ತಿಯಿಂದ ಎದುರಿಸುವಂತೆ ಮಾಡಿ ಅವರು ನಗುತ್ತಿರಲು ನೆರವಾಗುವುದು. "ಪವಾಡ"ಗಳನ್ನುಂಟು ಮಾಡುವುದು ನಮ್ಮ ಕೆಲಸವಲ್ಲ, ಅವು ಕೇವಲ ತೀವ್ರತೆಯನ್ನು ಕಡಿಮೆ ಮಾಡುತ್ತವೆ. ಪ್ರತಿಯೊಬ್ಬರನ್ನೂ ಬಲಿಷ್ಠರನ್ನಾಗಿಸಿ ಅವರ ಹುಟ್ಟು ಮತ್ತು ಸೃಷ್ಟಿಯ ಬಗ್ಗೆ ಅವರಲ್ಲಿ ಜಾಗೃತಿ ಮೂಡಿಸುವುದು ನಮ್ಮ ಕೆಲಸ. ಬದುಕಿನ ಸವಾಲುಗಳು ಬರುವುದು ತಮಗೆ ವಾಸ್ತವದ ಪಾಠಗಳನ್ನು ಕಲಿಸಲು ಎಂಬುದನ್ನು ಅವರು ಸಂಪೂರ್ಣವಾಗಿ ಅರಿತುಕೊಂಡು ಅವುಗಳನ್ನು ಪ್ರಜ್ಞಾಪೂರ್ವಕವಾಗಿ ಎದುರಿಸುತ್ತಿರುತ್ತಾರೆ; ಜೀವನವೊಂದು ಕಲಿಯುವ ಪ್ರಕ್ರಿಯೆ. "ಪವಾಡ" ಮಾಡುವುದು ತುಂಬಾ ಸುಲಭ! ■


**ಮಾನಸ ಫೌಂಡೇಶನ್ (ರಿ)**

ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560077. ಭಾರತ.

✆ (080) 2846 5280, 99000 75280 (ಬೆಳಗ್ಗೆ 10ರಿಂದ ಸಂಜೆ 5)

ಇ–ಮೇಲ್: info@lightagemasters.com ವೆಬ್‌ಸೈಟ್: www.lightagemasters.com


**ಜ್ಯೋತಿಕಾರ್ಯದ ವಾರ್ತಾಪತ್ರ**



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ–ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ

ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ

ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ,
ಬನಶಂಕರಿ 2ನೇ ಹಂತ

### ಆನೇಕಲ್‌ನಲ್ಲಿ

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಸಪ್ತರ್ಷಿ ಧ್ಯಾನ ಕೇಂದ್ರ, ರಾಜರಾಜೇಶ್ವರಿ ಬಡಾವಣೆ

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು 'Manasa Light Age Foundation' ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ತಪೋನಗರದ ನಿವಾಸಿಗಳು ಕ್ರಿಕೆಟ್ ಪಂದ್ಯಗಳನ್ನಾಡಿದರು.

### ಸುದ್ದಿ-ಸೂಚನೆ

- 14-01-2018 ರಂದು ಶಂಬಲ ಗ್ರೂಪ್‌ನ ಹೊಸ ಬ್ಯಾಚ್ ಪ್ರಾರಂಭವಾಗುತ್ತದೆ. ಚಕ್ರ ಚಾಲನೆಯ ಹಂತದ ತಮ್ಮ ಸಾಧನೆಯನ್ನು ಪೂರ್ಣಗೊಳಿಸಿರುವ ಸಾಧಕರು ಶಂಬಲ ಗ್ರೂಪ್‌ಗೆ ಸೇರಬಹುದು. ಈ ಗ್ರೂಪ್‌ಅನ್ನು ಸೇರಬಯಸುವ ಸಾಧಕರು, 31-12-2017 ರೊಳಗೆ ಮಾನಸ ಆಫೀಸಿನಲ್ಲಿ ತಮ್ಮ ಹೆಸರನ್ನು ರಿಜಿಸ್ಟರ್ ಮಾಡಬಹುದು. ದೂರಕಲಿಕೆಯ ಸಾಧಕರು ಕೂಡ ಸೇರಬಹುದು. ಈಗಿನ ಶಂಬಲ ಗ್ರೂಪ್ ಸಾಧಕರು ಕೂಡಾ ತಮ್ಮ ನೋಂದಣಿಯನ್ನು ನವೀಕರಿಸಿಕೊಳ್ಳಲು ತಮ್ಮ ಹೆಸರನ್ನು 31-12-2017 ರೊಳಗೆ ರಿಜಿಸ್ಟರ್ ಮಾಡಬೇಕು.
- 01-02-2018ನೇ ಗುರುವಾರದಂದು 'ವಿಶ್ವ ಸಂಚಲನ ದಿನ'ವನ್ನು ಹಮ್ಮಿಕೊಳ್ಳಲಾಗಿದೆ. ಆ ದಿನಕ್ಕಾಗಿ ಶಾಲೆಗಳನ್ನು ಸಂಪರ್ಕಿಸಿ, ಲೈಟ್ ಚಾನಲಿಂಗ್ ಸೆಷನ್ ನಡೆಸಲು ನಮಗೆ ಕಾರ್ಯಕರ್ತರ ಅಗತ್ಯವಿದೆ. ಈ ದಿನ ಕೆಲಸ ಮಾಡಲು ಇಚ್ಛಿಸುವ ಸಾಧಕರು ತಮ್ಮ ಹೆಸರನ್ನು ಶ್ರೀ ಮನೋಜ್ ಚೋಪ್ರಾರವರಿಗೆ ನೀಡಬಹುದು.
- 4-2-2018 ರಂದು ತಪೋನಗರದಲ್ಲಿ ಅಮರ ಜಯಂತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ನಿಮಗೆಲ್ಲರಿಗೂ ಈ ವಿಶೇಷ ಕಾರ್ಯಕ್ರಮಕ್ಕೆ ಆದರದ ಸ್ವಾಗತ. ಇದರಲ್ಲಿ ಭಾಗವಹಿಸಲು ಇಚ್ಛಿಸುವವರು, 02-02-2018 ರೊಳಗೆ ತಮ್ಮ ಹೆಸರನ್ನು ಮಾನಸ ಆಫೀಸಿನಲ್ಲಿ ನೋಂದಾಯಿಸಬೇಕಾಗಿ ವಿನಂತಿ.
- 25-12-2017 ರಂದು ಧ್ಯಾನಿಗಳು ತಪೋನಗರದ ಧ್ಯಾನಮಂದಿರದಲ್ಲಿ ಸೇರಿ, ಜೀಸಸ್ ಕ್ರೈಸ್ಟ್‌ಗೆ ತಮ್ಮ ಪ್ರೀತಿ ಮತ್ತು ಗೌರವವನ್ನು ಅರ್ಪಿಸಿದರು ಮತ್ತು ಇಡೀ ಪ್ರಪಂಚಕ್ಕೆ ಬೆಳಕನ್ನು ಹರಡಿದರು.
- 2018ನೇ ಇಸವಿಯ ಮಾನಸ ಕ್ಯಾಲೆಂಡರ್, ಆಂಡ್ರಾಯ್ಡ್ ಪ್ಲಾಟ್‌ಫಾರ್ಮ್‌ನಲ್ಲಿ ಕೂಡ ಲಭ್ಯವಿದೆ. ಆಂಡ್ರಾಯ್ಡ್ ಬಳಕೆದಾರರು ನಮ್ಮ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಅಥವ 'ಗೂಗಲ್ ಪ್ಲೇ ಸ್ಟೋರ್'ನಲ್ಲಿ 'Manasa Calendar'ಅನ್ನು ಹುಡುಕಿ ಡೌನ್‌ಲೋಡ್ / ಅಪ್ಡೇಟ್ ಮಾಡಿಕೊಳ್ಳಬಹುದು.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 02 | ಮಂಗಳ | ಪೂರ್ಣಿಮಾ |
| 09 | ಮಂಗಳ | ಕೃಷ್ಣ ಅಷ್ಟಮಿ |
| 15 | ಸೋಮ | ಉತ್ತರಾಯಣ ಆರಂಭ<br>ಮಕರ ಸಂಕ್ರಾಂತಿ<br>ಮಾಸ ಶಿವರಾತ್ರಿ |
| 16 | ಮಂಗಳ | ಅಮಾವಾಸ್ಯೆ |
| 24 | ಬುಧ | ರಥ ಸಪ್ತಮಿ |
| 25 | ಗುರು | ಶುಕ್ಲ ಅಷ್ಟಮಿ |
| 27 | ಶನಿ | ಶುಕ್ಲ ದಶಮಿ |
| 31 | ಬುಧ | ಪೂರ್ಣಿಮಾ<br>ಚಂದ್ರ ಗ್ರಹಣ:<br>4.21 PM - 9.38 PM |

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು: ಬೆಳಿಗ್ಗೆ 11-12<br>ಲೈಟ್ ಚಾನಲಿಂಗ್:<br>ಮಧ್ಯಾಹ್ನ 12-1 |
| 14-1-2018 | ಮಧ್ಯಾಹ್ನ 2ಕ್ಕೆ<br>ಶಂಬಲ ಗ್ರೂಪ್ ಸಂಧಿಸುತ್ತದೆ<br>ಮಧ್ಯಾಹ್ನ 2.30ಕ್ಕೆ ಲೈಟ್ ಚಾನಲ್ ಕಾರ್ಯಕರ್ತರ ಸಭೆ |
| 21-1-2018 | ಮಧ್ಯಾಹ್ನ 2ಕ್ಕೆ<br>'ರಾ' ಗ್ರೂಪ್ ಸಂಧಿಸುತ್ತದೆ |

### ತಪೋನಗರದಲ್ಲಿ ಅಮರ ಜಯಂತಿ ಕಾರ್ಯಕ್ರಮ

**ಭಾನುವಾರ, 04-02-2018**

| | |
|---|---|
| ಬೆಳಿಗ್ಗೆ 11 ಕ್ಕೆ | ಸ್ವಾಗತ<br>ಭಾಷಣಗಳು<br>ವಿಶೇಷ ಧ್ಯಾನ |
| ಮಧ್ಯಾಹ್ನ 12.30ಕ್ಕೆ | ಪ್ರಸಾದ |

### ಆನೇಕಲ್ ಕಾರ್ಯಕ್ರಮ

ಅಮರ ಜಯಂತಿ ಕಾರ್ಯಕ್ರಮವನ್ನು ಆನೇಕಲ್‌ನ ನಮ್ಮ ಸಪ್ತರ್ಷಿ ಧ್ಯಾನ ಕೇಂದ್ರದಲ್ಲಿ 01-02-2018 ರಂದು ಬೆಳಿಗ್ಗೆ 11.30 ಘಂಟೆಗೆ ಆಯೋಜಿಸಲಾಗಿದೆ.

## ಲೈಟ್ ಚಾನಲಿಂಗ್ ಅನುಭವಗಳು

ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ

ಲೈಟ್ ಚಾನಲಿಂಗ್ ಅಭ್ಯಾಸದ ನಂತರ, ನಾನು ನೋಡುವ ದೃಷ್ಟಿಕೋನ ಸುಧಾರಿಸಿದೆ. ನನ್ನ ಸುತ್ತಲೂ ಬೆಳಕು ಪ್ರಕಾಶಮಾನವಾಗಿ ಆವರಿಸಿರುವಂತೆ ಅನಿಸುತ್ತಿದೆ. ಇದೊಂದು ಅದ್ಭುತ ಅನುಭವ. ಈಗ ನಾನು ಸಕಾರಾತ್ಮಕಳಾಗಿದ್ದೇನೆ. ನಾವು ಒಳ್ಳೆಯದನ್ನು ಮಾಡಿದರೆ, ಒಳ್ಳೆಯದನ್ನೇ ಪಡೆಯುತ್ತೇವೆ ಎಂಬುದನ್ನು ನಾನು ನಂಬುತ್ತೇನೆ. ಲೈಟ್ ಚಾನಲಿಂಗ್ ಮಾಡುವುದರಿಂದ ನಾವು ಸಕಾರಾತ್ಮಕರಾಗುವತ್ತ ಚಲಿಸುತ್ತೇವೆ.

– ಶಾಲಿನಿ ಮಲ್ಹೋತ್ರ, ಆರ್ಮಿ ಪಬ್ಲಿಕ್ ಸ್ಕೂಲ್, ಎ.ಎಸ್.ಸಿ. ಕೇಂದ್ರ, ವಿಕ್ಟೋರಿಯ ರಸ್ತೆ, ಬೆಂಗಳೂರು

ನಮ್ಮ ಶಾಲೆಯಲ್ಲಿ ಪ್ರತಿ ದಿನ ಲೈಟ್ ಚಾನಲಿಂಗ್ ಅಭ್ಯಾಸ ಮಾಡುತ್ತಿದ್ದೇವೆ. ಕಳೆದ ಮೂರು ವರ್ಷಗಳಿಂದ ನಾನು, ವಿದ್ಯಾರ್ಥಿಗಳು ಮತ್ತು ಉಪಧ್ಯಾಯರುಗಳ ಜೊತೆಗೆ ಲೈಟ್ ಚಾನಲಿಂಗ್ ಮಾಡುತ್ತಿದ್ದೇನೆ. ಇದು ಬಹಳ ಚೆನ್ನಾಗಿದೆ ಮತ್ತು ಸಂತೋಷ ಮತ್ತು ಆಹ್ಲಾದತೆ ತಂದು ಕೊಟ್ಟಿದೆ. ನನ್ನಲ್ಲಿ ಸಹನೆ ಮತ್ತು ಆತ್ಮ ವಿಶ್ವಾಸವನ್ನು ಹೆಚ್ಚಿಸಿದೆ. ನನ್ನ ಕೆಲಸದಲ್ಲಿ ನನಗೆ ಸಹಾಯ ಮಾಡುತ್ತಿದೆ. ನನ್ನ ಭಾಷೆ ಉತ್ತಮಗೊಂಡಿದೆ ಮತ್ತು ನಾನು ಮಾತನಾಡುವ ಶೈಲಿ ಮೃದುವಾಗಿದೆ. ಈಗ ನಾನು ಎಂಥ ಸಂದರ್ಭವನ್ನಾದರೂ ಸಮಾಧಾನದಿಂದ ಎದುರಿಸಬಲ್ಲೆ.

– ಶ್ರೀ. ಹೆಮಂತ್ ಗುಲಾಬ್ ಶಿಂದೆ, ಸಹಾಯಕರು, ದರೋಡ್ ಹೈ ಸ್ಕೂಲ್, ಪುಣೆ.

2010ನೇ ಇಸವಿಯಿಂದ ನಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅಭ್ಯಾಸ ಮಾಡುತ್ತಿದ್ದೇವೆ. ಇದು ನಮ್ಮ ವಿದ್ಯಾರ್ಥಿಗಳಿಗೆ ಬಹಳಷ್ಟು ಸಹಾಯ ಮಾಡಿದೆ. ವಿದ್ಯಾರ್ಥಿಗಳಲ್ಲಿ ಜ್ಞಾಪಕ ಶಕ್ತಿ, ಮತ್ತು ಏಕಾಗ್ರತೆ ಹೆಚ್ಚಿರುವುದು ನಿಖರವಾಗಿ ಕಂಡು ಬರುತ್ತಿದೆ. ಈ ಲೈಟ್ ಚಾನಲಿಂಗ್‌ನಿಂದ ಅನೇಕ ಜನರು ತಮ್ಮ ನಿರಾಶಾದಾಯಕ ಜೀವನದಿಂದ ಹೊರಗೆ ಬಂದಿದ್ದಾರೆ, ಮತ್ತು ಸ್ವತಃ ನನಗೆ ಚೈತನ್ಯದ ಅನುಭವ ಆಗುತ್ತಿದೆ. ನಾನು ಬೇರೆಯವರಿಗಾಗಿ ಬೆಳಕಿನಲ್ಲಿ ಏನನ್ನು ಪ್ರಾರ್ಥಿಸಿಕೊಂಡಿದ್ದೆನೋ, ಅದೆಲ್ಲವನ್ನು ಅವರು ಪಡೆದುಕೊಂಡಿದ್ದಾರೆ. ನನಗೆ ಈ ಸುಂದರವಾದ ಟೆಕ್ನಿಕ್‌ನಲ್ಲಿ ನಂಬಿಕೆ ಇದೆ. ನನ್ನ ಸಂಸಾರ ಸಹ ಸಂತೋಷ ಮತ್ತು ತೃಪ್ತಿಯಿಂದ ಇದೆ. ನನ್ನ ಶಾಲೆ ಸುಂದರವಾಗಿರಬೇಕೆಂಬ ನನ್ನ ಆಸೆ ಈಡೇರಿದೆ. ಲೈಟ್ ಚಾನಲಿಂಗ್ ಟೆಕ್ನಿಕ್ ಅಭ್ಯಾಸವನ್ನು ಕಲಿಸಿಕೊಟ್ಟಿದ್ದಕ್ಕಾಗಿ, ನಾನು ಹೃದಯ ಪೂರ್ವಕವಾಗಿ ಗುರೂಜಿ ಕೃಷ್ಣಾನಂದ ಅವರಿಗೆ ಮತ್ತು ಮಾನಸ ಫೌಂಡೇಶನ್ ಸಂಸ್ಥೆಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

– ಶ್ರೀಮತಿ. ವಿಜಯಶ್ರೀ ಮಹಾಧಿಕ್, ಉಪಧ್ಯಾಯರು, ಎಸ್.ಎನ್.ಡಿ.ಟಿ. ಸ್ಕೂಲ್, ಪುಣೆ.

ಮೇ ತಿಂಗಳು ಪೂರ್ತಿ ನಾವು ಲೈಟ್ ಚಾನಲಿಂಗ್ ಅಭ್ಯಾಸ ಮಾಡಿದ್ದೇವೆ. ಇದು ನಮಗೆ ಅನೇಕ ರೀತಿಯಲ್ಲಿ ಸಹಾಯ ಮಾಡಿದೆ. ತರಗತಿಯಲ್ಲಿ ಕಲಿಸಿಕೊಟ್ಟಿದ್ದೆಲ್ಲವೂ ನಮಗೆ ನೆನಪಿದೆ. ಈಗ ನಮ್ಮ ಮನಸ್ಸು ಸಮಾಧಾನದಿಂದ ಇದೆ ಮತ್ತು ಹೆಚ್ಚು ಯೋಚನೆಗಳು ಇರುವುದಿಲ್ಲ. ನಮಗಿದ್ದ ಭಯ ಕಡಿಮೆಯಾಗಿದೆ. ನಮ್ಮ ಕೀಳರಿಮೆಯಿಂದ ನಮಗೆ ಹೊರಗೆ ಬರಲು ಇದು ಸಹಾಯ ಮಾಡಿದೆ.

– ವೆಂಕಟೇಶ್ವರ ತರಗತಿ ವಿದ್ಯಾರ್ಥಿಗಳು, ಪುಣೆ

## ತಪೋನಗರ ಡೈರಿ

ಸೀಮಾ ಅಲ್‌ಮೇಲ್; ಅನು: ಪಾಂಡುರಂಗ

ಮುಂದಿನ ಪೀಳಿಗೆಯ ತಪೋನಗರದ ಬಾಲಕಿ ಸ್ವಸ್ತಿಕ ಕಾನಡೆ, ತಪೋನಗರ ನಿವಾಸಿಗಳಿಗಾಗಿ ಕ್ರಿಕೆಟ್ ಪಂದ್ಯಗಳ ಪ್ರಸ್ತಾವನೆ ಸಲ್ಲಿಸಿದಳು. ಈ ಸಲಹೆಯನ್ನು ಎಲ್ಲರೂ ಒಪ್ಪಿದ ನಂತರ, ಈ ಕ್ರಿಕೆಟ್ ಪಂದ್ಯವನ್ನು ವಿಖ್ಯಾತ್ ಸುಧಾಕರ್, ವಿನಯ್ ಎನ್, ಮತ್ತು ಶ್ರುತಿ ಸುಧಾಕರ್ ಅವರುಗಳು ಬಹಳ ಗಮನವಿಟ್ಟು ಸಂಘಟಿಸಿದರು. ಆಟದ ಪ್ರತಿಯೊಂದು ಅಂಶವನ್ನು – ಆಟದ ನಿಯಮಗಳು, ಸ್ಕೋರ್ ಕೀಪಿಂಗ್, ಆಸನ ವ್ಯವಸ್ಥೆ, ಲಘು ಉಪಹಾರ, ಹೀಗೆ ಎಲ್ಲವನ್ನು ವಿವರವಾಗಿ ವಿಚಾರಮಾಡಿದರು. ವಿಚಾರಪೂರ್ಣವಾಗಿ, ಕೆಲ ದಿನಗಳ ಮುಂಚಿತವಾಗಿಯೇ ಅಭ್ಯಾಸ ಪಂದ್ಯಗಳನ್ನು ವ್ಯವಸ್ಥೆ ಮಾಡಿದರು, ಆಟಕ್ಕೆ ಬೇಕಾದ ಉಪಕರಣಗಳು ಲಭ್ಯವಿರುವಂತೆ ನೋಡಿಕೊಂಡರು. ತಪೋನಗರಕ್ಕೆ ಹತ್ತಿರವಿರುವ ಮೈದಾನವನ್ನು ಆಟಕ್ಕೆ ಸಿದ್ಧಗೊಳಿಸಿದರು.

ಡಿಸೆಂಬರ್ 2ನೇ ತಾರೀಖು ನಿವಾಸಿಗಳೆಲ್ಲರೂ ಕ್ರೀಡಾ ಉಡುಪುಗಳನ್ನು ಧರಿಸಿ ಉತ್ಸಾಹದಿಂದ ಬಂದರು. ಲೈಟ್ ಚಾನಲಿಂಗ್ ಮಾಡಿದ ನಂತರ, ತಪೋನಗರ ಪ್ರಿಮಿಯರ್ ಲೀಗ್ ಎಂದು ಸಮರ್ಪಕವಾಗಿ ನಾಮಕರಣವಾದ ಪಂದ್ಯಗಳನ್ನು ಪ್ರಾರಂಭಿಸಲು ನಾಣ್ಯವನ್ನು ಮೇಲಕ್ಕೆ ಚಿಮ್ಮಿಸಲಾಯಿತು. ಚಿಣ್ಣರು ತಮ್ಮ ಮುದ್ದಾದ ಕೈಗಳನ್ನು ಆಡಿಸಿ ಆಟಗಾರರಿಗೆ ಉತ್ಸಾಹ ತುಂಬುತ್ತಿದ್ದರು, ಅಕ್ಕರೆಯ ತಂದೆತಾಯಿಗಳು ತಾತ್ಕಾಲಿಕ ಪೆವಿಲಿಯನ್‌ನಿಂದ ಗಮನವಿಟ್ಟು ನೋಡುತ್ತಿದ್ದರು. ಪುಟ್ಟ ಪುಟ್ಟ ಮಕ್ಕಳಿಗೂ ಬ್ಯಾಟನ್ನು ಹೇಗೆ ಬೀಸಬೇಕೆಂದು ಕಲಿಸಿಕೊಡುತ್ತಿದ್ದರು.

ಪ್ರಕೃತಿ ಮಾತೆ ಮಳೆಯನ್ನು ದೂರವಿಟ್ಟಳು ಮತ್ತು ಮೋಡ ಕವಿದ ವಾತಾವರಣವನ್ನು ಸೃಷ್ಟಿಸಿ ಆ ಸಂತೋಷದ ದಿನವು ನೆನಪಿನಲ್ಲಿ ಉಳಿಯುವಂತೆ ಮಾಡಿದಳು. ಈ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಯಿತು. ಸ್ಕೋರ್ ಬೋರ್ಡ್‌ಗೂ ಗೆದ್ದವರು ಮತ್ತು ಸೋತವರನ್ನು ಪ್ರತ್ಯೇಕಿಸಲಾಗಲಿಲ್ಲ, ಕಾರಣ ಪ್ರತಿಯೊಬ್ಬರೂ ತಾವು ವಿಜಯಶಾಲಿಗಳೆಂದೇ ಭಾವಿಸಿದ್ದರು. ಬಹುಮಾನಗಳನ್ನು ಕೂಡ ವಿತರಿಸಲಾಯಿತು.

ಸಾಕಷ್ಟು ಪ್ರಮಾಣದ ಪ್ರತಿಭೆ, ಜಾಣ್ಮೆ, ಮತ್ತು ಪ್ರಾಮಾಣಿಕತೆಯಿಂದ ಈ ಪಂದ್ಯಗಳನ್ನು ಆಯೋಜಿಸಲಾಗಿತ್ತು. ಎಲ್ಲಕ್ಕಿಂತ ಹೆಚ್ಚಾಗಿ, ಗುರೂಜಿಯವರ ಮೇಲಿನ ಪ್ರೀತಿ, ಅವರ ಮಾರ್ಗ ಮತ್ತು ಸ್ಥಳದ ಪ್ರಭಾವದಿಂದಾಗಿ ಸಂಘಟಕರು ಅತ್ಯುತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿದರು. ವಾರಾಂತ್ಯದಲ್ಲಿ ಸೇರುತ್ತಿರುವ ಸೈಕ್ಲಿಂಗ್ ಉತ್ಸಾಹಿ ತಂಡವು, ತಪೋನಗರದ ಸೈಕ್ಲಿಂಗ್ ಟೂರ್ ಒಂದನ್ನು ಆಯೋಜಿಸಲು ಈಗ ಚಿಂತನೆ ಮಾಡಬಹುದಾಗಿದೆ! ■

## ಲೈಟ್ ಚಾನಲ್ಸ್

ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡುವುದು.

# ಗುರೂಜಿಯವರ ನುಡಿಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

28-8-2005

**ಮಹರ್ಷಿ ಅಮರರವರ ಮಹಾಸಮಾಧಿ ದಿನ.**

ಅಮರರವರು ಇಲ್ಲಿದ್ದಾರೆ. ಅವರು ನನ್ನ ಭಾಗವೇ ಆಗಿದ್ದಾರೆ – ನನ್ನ ಉಸಿರಾಟದ ತರಹ. ಅವರು ಬದುಕಿದ್ದಾಗ ಅವರನ್ನು ಹೆಚ್ಚು ಜನ ಅರ್ಥಮಾಡಿಕೊಳ್ಳದೆ ಇದ್ದುದು ಸ್ವಲ್ಪ ದುಃಖದ ವಿಷಯ. ಅವರನ್ನು ಕೆಲಮಟ್ಟಿಗೆ ದಡ್ಡ ಮತ್ತು ಪ್ರಾಪಂಚಿಕ ವ್ಯವಹಾರ ತಿಳಿಯದ ಮನುಷ್ಯನೆಂದೂ ತಪ್ಪಾಗಿ ಅರ್ಥಮಾಡಿಕೊಂಡಿದ್ದರು. ಆದರೆ ಈಗ, ಪೂರ್ಣವಾಗಿಯಲ್ಲದಿದ್ದರೂ ಅವರನ್ನು ಬಹುತೇಕ ಅರ್ಥಮಾಡಿಕೊಂಡಿರುವ ಅನೇಕರು ಇಲ್ಲಿದ್ದಾರೆ. ಅವರು ಜೀವಂತವಾಗಿದ್ದಾಗ ಅವರ ಸುತ್ತ ನೆರೆದವರು ಹೆಚ್ಚಿರಲಿಲ್ಲ, ಆ ಸಂಖ್ಯೆ ತುಂಬ ಕಡಿಮೆಯಿತ್ತು ಹಾಗೂ ಹೆಚ್ಚು ಜನ ಮಾರ್ಗದಲ್ಲಿ ಮುಂದುವರೆಯಲಿಲ್ಲ. ಹಾಗೆ ಇದ್ದುದಕ್ಕೆ ಕಾರಣವೇನೆಂದರೆ ಅಮರರವರು ಅದನ್ನೇ ಬಯಸಿದ್ದರು ಎಂದು ನನಗೀಗ ಅರ್ಥವಾಗಿದೆ. ತಾವು ಯಾವುದೇ ಅಡಚಣೆಗಳಿಲ್ಲದೆ ಕೆಲಸಮಾಡಲು ಬಯಸುವುದಾಗಿ ನಮಗೆ ಸ್ಪಷ್ಟವಾಗಿ ಹೇಳುತ್ತಿದ್ದರು. ಅವರ ಕೆಲಸದ ಬಗ್ಗೆ, ಅವರ ಕೊಡುಗೆಗಳ ಬಗ್ಗೆ ನಾನು ಅನೇಕ ವೇಳೆ ಮಾತನಾಡಿದ್ದೇನೆ. ಹಾಗಿದ್ದರೂ ಹೊಸದಾಗಿ ಬಂದಿರುವವರ ಅನುಕೂಲಕ್ಕಾಗಿ ಕೆಲವು ವಿಷಯಗಳನ್ನು ಮತ್ತೊಮ್ಮೆ ಹೇಳಲು ಇಷ್ಟಪಡುತ್ತೇನೆ.

ಅವರು ಧ್ಯಾನದ ವಿಜ್ಞಾನವನ್ನು ನಮಗೆ ಕೊಟ್ಟರು. ಅವರು ಋಷಿಗಳ ಬಗೆಗಿನ ಜ್ಞಾನವನ್ನು ನಮಗೆ ಕೊಟ್ಟರು, ಸೃಷ್ಟಿ ಮತ್ತು ಅನೇಕ ಆಧ್ಯಾತ್ಮಿಕ ಸತ್ಯಗಳ ಬಗೆಗಿನ ಜ್ಞಾನವನ್ನು ನಮಗೆ ಕೊಟ್ಟರು. ಅವರು ಕೆಲವೊಂದು ವಿರೂಪಗಳಿಂದ, ಕೆಲವೊಂದು 'ಫತ್ವಾ'ಗಳಿಂದ ನಮ್ಮನ್ನು ಮುಕ್ತಗೊಳಿಸಿದ್ದು ನಮಗೆ ತಿಳಿದಿದೆ. ಅಂತಹ ಒಂದು ಫತ್ವಾ – ಗಾಯತ್ರಿ ಮಂತ್ರವನ್ನು ಹೆಂಗಸರು ಹೇಳಬಾರದು! ತಾನು 'ಓಂ' ಮಂತ್ರವನ್ನು ಹೇಳಬಾರದೆಂದು ತನ್ನ ಗುರು ಹೇಳಿದರೆಂದು ವಿದ್ಯಾವಂತ ಮಹಿಳೆಯೊಬ್ಬರು ನನಗೆ ಇತ್ತೀಚೆಗೆ ಹೇಳಿದರು. ಅಮರರವರು ಇಂತಹ ಫತ್ವಾಗಳಿಂದ ನಮ್ಮನ್ನು ಬಿಡುಗಡೆ ಮಾಡಿದರು. ಹೆಂಗಸರನ್ನೇ ಯಾಕೆ ಗುರಿಮಾಡುತ್ತಾರೆಂದು ನನಗೆ ತಿಳಿಯದು! ಅವರು ವಾಹನವನ್ನು ಚಲಾಯಿಸಬಾರದು, ಚುನಾವಣೆಗೆ ನಿಲ್ಲಬಾರದು, ಓಟ್ ಮಾಡಬಾರದು, ಇತ್ಯಾದಿ. ಪೂಜೆ ಮತ್ತು ಭಜನೆಗಳ ಬೆಲೆಯನ್ನು ಕುಗ್ಗಿಸದೆಯೇ, ಅವುಗಳನ್ನು ದಾಟಿಸಿ ನಮ್ಮನ್ನು ಮುಂದಕ್ಕೆ ಕರೆದೊಯ್ದರು. ಪೂಜೆಗಳು ಮತ್ತು ಭಜನೆಗಳು ಮುಖ್ಯ, ಆದರೆ ಅವುಗಳನ್ನು ಮೀರಿಹೋಗಿ ನಾವು ಸಾಧನೆಮಾಡಬಹುದೆಂದು ಅವರು ಹೇಳಿದರು. ಅವರು ಯಾವುದರ ಬಗ್ಗೆಯೂ ಲೇವಡಿ ಮಾಡಲಿಲ್ಲ, ಯಾವುದನ್ನೂ ಮೂದಲಿಸಲಿಲ್ಲ. ಅದು ಅವರ ವಿಶೇಷತೆಯಾಗಿತ್ತು. ಅವರು ಹೇಳುತ್ತಿದ್ದರು, "ಅದು ಒಳ್ಳೆಯದೇ, ಆದರೆ ಅದನ್ನೂ ಮೀರಿ ಹೋಗೋಣ." ಅಧ್ಯಾತ್ಮಿಕತೆಯೆಂದರೆ ರುದ್ರಾಕ್ಷಿಗಳನ್ನು ಧರಿಸುವುದಲ್ಲ ಮತ್ತು ಧ್ಯಾನ ಮಾಡುವುದಷ್ಟೇ ಕೂಡ ಅಲ್ಲ. ಅಧ್ಯಾತ್ಮಿಕತೆಯೆಂದರೆ ಪ್ರಾಮಾಣಿಕರಾಗಿರುವುದು, ಸತ್ಯವಂತರಾಗಿರುವುದು. ಯೋಗ್ಯವ್ಯಕ್ತಿಯಾಗಿರುವುದು, ಪರಿಪೂರ್ಣ ವ್ಯಕ್ತಿಯಾಗಿರುವುದು, ಎಲ್ಲ ಜೀವರಾಶಿಯನ್ನೂ ಗೌರವಿಸುವುದು. ಅವರು ನಮ್ಮನ್ನು ಧ್ಯಾನಕ್ಕಿಂತಲೂ ಮುಂದಕ್ಕೆ ಕರೆದುಕೊಂಡು ಹೋದರು ಎನ್ನುವ ಮಾತನ್ನು ನಾನು ಸೇರಿಸಬಯಸುತ್ತೇನೆ. ನಾವು ಸಾಧನೆಯ ಉನ್ನತ ಹಂತಗಳನ್ನು ತಲುಪಿದಾಗ ನಮಗೆ ಇದರ ಅರಿವಾಗುತ್ತದೆ.

ಅವರ ಎಲ್ಲ ಬೋಧನೆಗಳನ್ನು ನಾವು ಆಚರಣೆಗೆ ತರದಿದ್ದರೂ ಅವು ನಮಗೆ ತಿಳಿದಿವೆ ಮತ್ತು ಖಂಡಿತವಾಗಿಯೂ ನಾವು ಕೆಲವನ್ನು ಅಭ್ಯಾಸಮಾಡುತ್ತಿದ್ದೇವೆ. ಅವರ ಬಹು ದೊಡ್ಡ ಕೊಡುಗೆಯೆಂದರೆ ವಿನಯವಂತಿಕೆಯ ಬಲ, ಪ್ರೀತಿಯ ಶಕ್ತಿ. ಅವರು ಸಮಾಧಿಯನ್ನು ಜೀವನದ ಒಂದು ಅವಸ್ಥೆ ಎಂದರು, ಕಲಿಸುವುದನ್ನು ಬದುಕಿ ತೋರಿಸಿದರು. ಕಲಿಕೆಯನ್ನು ಬೇರೆಯವರ ಮೇಲೆ ಹೇರುವುದಲ್ಲ, ಸಿದ್ಧರಿದ್ದವರಿಗೆ ಮಾತ್ರ ಕಲಿಸುವುದು, ಅರ್ಥಮಾಡಿಕೊಳ್ಳುವಷ್ಟನ್ನು ಅಥವ ಸ್ವೀಕರಿಸುವಷ್ಟನ್ನು ಮಾತ್ರ ಹೇಳಿಕೊಡುವುದು ಅವರ ರೀತಿಯಾಗಿತು. ಒಂದು ಪ್ರಶ್ನೆಗೆ ಅವರು ಒಂದು ಉತ್ತರ ಕೊಡುತ್ತಿದ್ದರು. ಮುಂದೊಮ್ಮೆ ಒಂದು ವರ್ಷದ ನಂತರ ಅದೇ ಪ್ರಶ್ನೆಯನ್ನು ಕೇಳಿದರೆ ಅದೇ ಉತ್ತರವನ್ನು ಕೊಡುತ್ತಿದ್ದರಾದರೂ ಅದಕ್ಕೆ ಮತ್ತಷ್ಟನ್ನು ಸೇರಿಸುತ್ತಿದ್ದರು. ಅವರು ಉತ್ತರಗಳನ್ನು ಕಂತುಗಳಲ್ಲಿ ತಿಳಿಸುತ್ತಿದ್ದರೆಂದು ಕಾಲಾನಂತರ ನನಗೆ ಅರಿವಾಯಿತು. ಅವರು ಎಲ್ಲ ಉತ್ತರವನ್ನೂ ಒಮ್ಮೆಲೇ ತಿಳಿಸಿದ್ದರೆ, ಬಹುಶಃ ನಮಗೆ ಅರ್ಥವಾಗುತ್ತಿರಲಿಲ್ಲವೆಂದು ನಾನು ಅರಿತೆ. ಆದ್ದರಿಂದ ನಾವು ಬೆಳೆದಂತೆಲ್ಲಾ, ಅವರು ಸ್ವಲ್ಪ ಸ್ವಲ್ಪ ಜ್ಞಾನವನ್ನು ಸೇರಿಸುತ್ತಾ ಬಂದರು. ಅವರು ಹೇಳಿದರು, "ಪ್ರಪಂಚದ ಅಪರಿಪೂರ್ಣತೆಯನ್ನು ಒಪ್ಪಿಕೊಳ್ಳುವುದು ಸುಲಭವಲ್ಲ; ನಾವು ಯಾವಾಗಲೂ ವಿಮರ್ಶಾತ್ಮಕರಾಗಿರುತ್ತೇವೆ ಮತ್ತು ತೆಗಳುತ್ತೇವೆ. ಪ್ರಪಂಚದ ಅಪರಿಪೂರ್ಣತೆಯನ್ನು ನಾವು ಒಪ್ಪಿಕೊಳ್ಳಬೇಕು." ಚೈತನ್ಯಗಳ ಕಂಪನವನ್ನು ಬದಲಾಯಿಸುವುದರ ಮೂಲಕ ಬದಲಾವಣೆಯನ್ನು ತರುವ ಮಾರ್ಗವನ್ನು ಅವರು ಆಯ್ದುಕೊಂಡರು, ಬೇರೆ ಮಾರ್ಗಗಳು ಪರಿಣಾಮಕಾರಿಯಲ್ಲವೆಂದಲ್ಲ, ಆದರೆ ಅದೇಕೋ ಅವರು ಈ ಮಾರ್ಗವನ್ನೇ ಆಯ್ದುಕೊಂಡರು. ಈ ಮಾರ್ಗ ಅತ್ಯಂತ ಪರಿಣಾಮಕಾರಿಯೆಂದು ನಾನು ನಂಬುತ್ತೇನೆ. ಬದಲಾವಣೆಯನ್ನು ತರಲು ಯಾರಾದರೂ ಪ್ರತಿಭಟನೆಯ ಅಥವ ಕ್ರಾಂತಿಯ ಮಾರ್ಗವನ್ನು ಆಯ್ದುಕೊಳ್ಳಬಹುದು. ಅಥವ ಓಡಬಹುದು! ಸುನಾಮಿ ಎಲ್ಲೋ ಇದ್ದರೆ, ನಾವಿಲ್ಲಿ ಓಡುತ್ತೇವೆ! ಆದರೆ ಅವರ ಮಾರ್ಗಗಳು ಕಾರ್ಯರೂಪದಾಗಿರುತ್ತಿದ್ದವು. ಜನರನ್ನು ಮತ್ತು ವಿಚಾರಗಳನ್ನು ಕೂಡ ಎದುರು ಹಾಕಿಕೊಳ್ಳದಿರುವ ಮಾರ್ಗವನ್ನು ಅವರು ಹೇಳಿಕೊಟ್ಟರು. ನಾವು ಕೆಲವೊಮ್ಮೆ ಉನ್ನತ ನಿಯಮಗಳನ್ನೂ ಪಾಲಿಸಬೇಕಾಗುತ್ತದೆ ಎಂದು ತಿಳಿಸಿದರು. ಸನ್ನಿವೇಶವೊಂದಕ್ಕೆ ಒಂದು ಕಾಲಘಟ್ಟದಲ್ಲಿ ಪರಿಹಾರ 'ಎ' ಆಗಿರಬಹುದು. ಅದೇ ಸನ್ನಿವೇಶಕ್ಕೆ ಬೇರೊಂದು ಕಾಲಘಟ್ಟದಲ್ಲಿ ಪರಿಹಾರ 'ಎ' ಆಗಿರದೆ ಅದು 'ಬಿ' ಆಗಬಹುದು. ಇವುಗಳ ಬಗ್ಗೆ ನಾವು ಹೇಗೆ ನಿರ್ಧರಿಸಬಹುದು? ಸನ್ನಿವೇಶ ಒಂದೇ ಆದರೆ ಪರಿಹಾರಗಳು ಬೇರೆ ಬೇರೆ! ಕೆಲವೊಮ್ಮೆ ನಾವು ಕ್ಷಮಿಸಬೇಕಾಗುತ್ತದೆ ಮತ್ತು ಕೆಲವೊಮ್ಮೆ ನಾವು ಕಠಿಣವಾಗಿರಬೇಕಾಗುತ್ತದೆ. ಇಲ್ಲಿನ ಶಿಕ್ಷಕರು ಇದನ್ನು ಗಮನಿಸಬೇಕು, ನೀವು ಈ ವಿಷಯಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ನೇರ ಅನುಭವದ ಮತ್ತು ಉನ್ನತ ಮಟ್ಟಕ್ಕೆ ನಮ್ಮ ಅರಿವನ್ನು ಕೊಂಡೊಯ್ಯುವ ವಿಧಾನವನ್ನು ಅವರು ಕೊಟ್ಟರು. ಅದು ತಂತ್ರಗಳ ಮತ್ತು ಸಿದ್ಧಾಂತಗಳ ವಿಧಾನವಲ್ಲ, ಅದು ನೇರ ಅನುಭವದ ಮತ್ತು ಅರಿವಿನ ವಿಧಾನ. ಅವರು ನಮಗೆ ಶಕ್ತಿ ಸಾಮರ್ಥ್ಯದ ಮಾರ್ಗವನ್ನು ಕೊಟ್ಟರು. ಬಲವೆಲ್ಲಿದೆಯೋ ಅಲ್ಲಿ ತಾಳ್ಮೆಯಿರುತ್ತದೆ, ಅವಸರವಿರುವುದಿಲ್ಲ. ಆದ್ದರಿಂದಲೇ ನಮ್ಮ ಮಾರ್ಗವನ್ನು ವಿಸ್ತರಿಸುವ ಆತುರದಲ್ಲಿ ನಾವಿಲ್ಲ. ಹಿಮಾಲಯವು ವಿಶ್ವದೆಲ್ಲೆಡೆ ಸುತ್ತುವುದಿಲ್ಲ; ವಿಶ್ವವೇ ಹಿಮಾಲಯದೆಡೆಗೆ ಬರುತ್ತದೆ! ಜ್ಞಾನವನ್ನು ಸ್ವಲ್ಪ ವೇಗವಾಗಿ ಹರಡಲು ಪ್ರಯತ್ನಿಸಿದರೆ ಅದು ದುರ್ಬಲಗೊಳ್ಳುವ ಅಪಾಯವಿದೆ ಮತ್ತು ಕೆಲವೊಮ್ಮೆ ವಿರೂಪಗೊಳ್ಳುವ ಸಾಧ್ಯತೆ ಕೂಡ ಇದೆ. ಇದು ನಮಗೆ ಬೇಡವಾಗಿದೆ. ಋಷಿಗಳ ಮಾರ್ಗದಲ್ಲಿ ನಾವು ಗುರುತಿಸಬೇಕಾದ ಬಹು ಮುಖ್ಯ ವಿಷಯವೆಂದರೆ, ಎಲ್ಲ ರೀತಿಯ ವಿಕೃತಿಗಳನ್ನೂ ತೆಗೆದುಹಾಕಬೇಕೇ ಹೊರತು ಅವುಗಳ ಸೇರ್ಪಡೆಯಾಗಬಾರದು. ಆದ್ದರಿಂದಲೇ ಎಲ್ಲಿಯವರೆಗೆ ಸರಿಯಾದ ಜ್ಞಾನ ಸರಿಯಾದ ರೀತಿಯಲ್ಲಿ ತಲುಪುತ್ತಿದೆಯೋ ಅಲ್ಲಿಯವರೆಗೆ, ನಮ್ಮಲ್ಲಿ ಲಕ್ಷಮಂದಿಯಿದ್ದಾರೋ ಅಥವ ಕೆಲವೇ ನೂರು ಜನರಿದ್ದಾರೋ ಅನ್ನುವುದು ಮುಖ್ಯವಾಗುವುದಿಲ್ಲ. ಆದ್ದರಿಂದಲೇ ಹೊಸ ಕೇಂದ್ರಗಳನ್ನು ತೆರೆಯಲು ನಾವು ಉತ್ಸುಕರಾಗಿಲ್ಲ. ಅದಕ್ಕೆ ಇನ್ನೂ ಸಮಯವಿದೆ. ಇದು ಬರೀ ತಂತ್ರವನ್ನು ಹೇಳಿಕೊಡುವುದಲ್ಲ. ಇಲ್ಲಿ ನಾವು ವಿಷನ್ ಅನ್ನು ಹರಡಬೇಕು; ನಾವು ಬೆಳಕನ್ನು ಹರಡಬೇಕು; ಆದ್ದರಿಂದಲೇ ಇಲ್ಲಿನ ಕೆಲಸ ಅತ್ಯಂತ ಕಠಿಣ. ನಾವು ಹೊಣೆ ಅರಿತವರಾಗಿರಬೇಕು. ■

## ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

26-11-2017

ಗುರೂಜಿಯವರನ್ನು ನಿಧಾನವಾಗಿ ಹೆಚ್ಚು ಹೆಚ್ಚು ಅರ್ಥಮಾಡಿಕೊಳ್ಳಲು ನಮಗೆ ಸಾಧ್ಯವಾಗುತ್ತಿದೆಯೆಂದು ನಾನು ಭಾವಿಸುತ್ತೇನೆ. ಗುರೂಜಿಯವರು ಅತ್ಯಂತ ಸಮರ್ಪಕವಾದ ವ್ಯವಸ್ಥೆಯನ್ನು ರೂಪಿಸಿರುವುದರಿಂದಾಗಿ ಇಲ್ಲಿನ ಕೆಲಸವನ್ನು ಮುಂದುವರಿಸಿಕೊಂಡು ಹೋಗಲು ನಮಗೆ ಸಾಧ್ಯವಾಗಿದೆ. ಅವರು ರೂಪಿಸಿದ ಪರಿಪೂರ್ಣ ವ್ಯವಸ್ಥೆಯನ್ನು ನಾವು ಅನುಸರಿಸಿಕೊಂಡು ಹೋದರೆ ಸಾಕು. ಅವರ ಕೆಲಸವನ್ನು ಮುಂದುವರಿಸುತ್ತಿರುವುದರಿಂದ ನನಗೆ ಸಂತೋಷವಾಗಿದೆ.

ಇಂತಹ ವಿಶೇಷ ಕಾರ್ಯಕ್ರಮಗಳಂದು ಮಾಸ್ಟರ್‌ಗಳು ಕೊಡುಗೆಗಳನ್ನು ತರುತ್ತಾರೆಂದು ಗುರೂಜಿಯವರು ಹೇಳುತ್ತಿದ್ದರು. ಈ ಕೊಡುಗೆಗಳನ್ನು ಅನೇಕ ಜನರ ಬದುಕಿನಲ್ಲಿ ನಾನು ಕಾಣುತ್ತಿದ್ದೇನೆ. ಕೆಲವರಿಗೆ ಇದು ಬಹುದಿನಗಳಿಂದ ಕಾಯುತ್ತಿದ್ದ ಉದ್ಯೋಗ, ಕೆಲವರಿಗೆ ಉತ್ತಮ ಆರೋಗ್ಯ, ಕೆಲವರಿಗೆ ದೀರ್ಘ ಕಾಲದ ಸಮಸ್ಯೆಗೆ ಪರಿಹಾರ, ಕೆಲವರಿಗೆ ತಮ್ಮ ಕನಸಿನ ವಾಹನವನ್ನು ಪಡೆಯುವುದು ಅಥವ ಪರೀಕ್ಷೆಯೊಂದರಲ್ಲಿ ಉತ್ತೀರ್ಣರಾಗುವುದು. ನಮ್ಮೆಲ್ಲರಿಗೂ ಇದು ನಮ್ಮ ಆಧ್ಯಾತ್ಮಿಕ ಸಾಧನೆಯಲ್ಲಿ ಮುನ್ನಡೆಯಲು ಸಹಾಯಕ.

ಗುರೂಜಿಯವರು ಎಲ್ಲರೊಂದಿಗೆ ಮತ್ತು ಎಲ್ಲದರೊಂದಿಗೆ ಅತ್ಯುತ್ತಮ ಸಂಬಂಧವನ್ನು ಹೊಂದಿದ್ದರು. ಅವರ ಸಂಬಂಧ ಷರತ್ತುರಹಿತ ಪ್ರೀತಿಯ ಮೇಲೆ ನಿಂತಿತ್ತು. ಅವರ ಸಂಬಂಧ ಅವರ ಗುರುವಾದ ಮಹರ್ಷಿ ಅಮರರವರೊಂದಿಗೆ ಹೇಗಿದೆಯೆಂದರೆ, ಅಮರರವರು ಕೇಳಬಂದ ಪ್ರತಿಬಾರಿಯೂ ಗುರೂಜಿಯವರೂ ಕೇಳಬರುತ್ತಾರೆ. ಮಹರ್ಷಿ ಅಮರರವರು ಪ್ರತಿ ಶತಮಾನದಲ್ಲೂ ಕೇಳಬರುತ್ತಾರೆ, ಆಗೆಲ್ಲಾ ಅವರ ಕೆಲಸವನ್ನು ಮುಂದುವರೆಸಲು ಗುರೂಜಿಯವರೂ ಅವರೊಂದಿಗೆ ಕೇಳಬರುತ್ತಾರೆ. ಮಾನವ ಮಟ್ಟದ ಈ ಕೆಲಸಕ್ಕಾಗಿ ನಮ್ಮಲ್ಲಿ ಕೆಲವರು ಮಾತ್ರವೇ ಅವರನ್ನು ಆಗಾಗ್ಗೆ ಭೇಟಿಮಾಡಲು ಸಾಧ್ಯವಾಗುತ್ತಿದ್ದರೂ, ಅವರೊಂದಿಗಿನ ವಿಶೇಷ ಆತ್ಮೀಯತೆ ಮತ್ತು ಬಾಂಧವ್ಯವನ್ನು ಪ್ರತಿಯೊಬ್ಬರೂ ಅನುಭವಿಸುತ್ತಿದ್ದರು. ಅವರು ಎಲ್ಲರೊಂದಿಗೆ ಒಂದೇ ರೀತಿಯ ಅಂತರ ಕಾಯ್ದುಕೊಂಡಿದ್ದರೆಂದು ಅವರೇ ಹೇಳಿದ್ದರು.

ಅವರಿಗೆ ಹತ್ತಿರವಾಗಿದ್ದ ಮನೋವತಿಯ ನಾಯಿ ಬಾಬಿಯ ಬಗ್ಗೆ ಗುರೂಜಿಯವರು ಬೆಳಕಿಗೆ ಬಾಗಿಲುಗಳು ಪುಸ್ತಕದಲ್ಲಿ ಬರೆದಿದ್ದಾರೆ. ಗುರೂಜಿಯವರು ಮನೋವತಿಯಿಂದ ಹೊರಬರಬೇಕಾಗಿ ಬಂದು ಗೊಲ್ಲಹಳ್ಳಿಯ ಗುಡಿಸಲೊಂದರಲ್ಲಿ ವಾಸಿಸುತ್ತಿದ್ದರು. ಒಮ್ಮೆ ಅವರು ಗೊಲ್ಲಹಳ್ಳಿಯಿಂದ ಇನ್ನೇನು ಬಸ್ ಹತ್ತಬೇಕೆನ್ನುವಾಗ ಬಾಬಿ ಬಂದು ಅವರ ಅಂಗಿಯನ್ನು ಎಳೆಯಿತು. ಅದು ಏನನ್ನೋ ಹೇಳಲು ಬಯಸುತ್ತಿತ್ತು. ಗುರೂಜಿಯವರು ಬಸ್ಸನ್ನು ಹತ್ತಲೇಬೇಕಾಗಿದ್ದರಿಂದ ಬಾಬಿಗೆ ಹೆಚ್ಚು ಗಮನ ಕೊಡಲಾಗಲಿಲ್ಲ. ನಂತರ ಬಾಬಿ ತೀರಿಕೊಂಡ ಸುದ್ದಿ ಅವರಿಗೆ ತಿಳಿಯಿತು. ಗುರೂಜಿಯವರು ಗೊಲ್ಲಹಳ್ಳಿಯಲ್ಲಿರುವುದನ್ನು ಹೇಗೋ ಅದು ಪತ್ತೆ ಮಾಡಿ ಅವರಿಗೆ ವಿದಾಯ ಹೇಳಲೆಂದು ಬಂದಿತ್ತು. ಬಾಬಿಯೊಡನೆ ಗುರೂಜಿಯವರ ಸಂಬಂಧ ಹಾಗಿತ್ತು. ಎಲ್ಲರೊಂದಿಗೂ, ಎಲ್ಲದರೊಂದಿಗೂ ಅಂತಹ ಆತ್ಮೀಯ ಸಂಬಂಧ ಗುರೂಜಿಯವರಿಗಿತ್ತು – ಅವರ ಕಾರಿನೊಂದಿಗೆ, ಅವರ ಪೆನ್ನಿನೊಂದಿಗೆ ಕೂಡಾ! ಅದೇ ರೀತಿ ದೇವರುಗಳೊಂದಿಗೆ ಮತ್ತು ಅವರ ಮಾಸ್ಟರ್‌ಗಳೊಂದಿಗೆ. ಈ ಸೃಷ್ಟಿಯ ಪ್ರತಿಯೊಂದೂ ದೈವೀ ವಸ್ತುವಾದ ಪ್ರಜ್ಞೆಯಿಂದ ಮಾಡಲ್ಪಟ್ಟಿದೆ ಎಂದು ಅವರು ತಿಳಿಸಿದ್ದರು. ಮತ್ತು ಪ್ರತಿಯೊಂದಕ್ಕೂ ಅದರ ಕೇಂದ್ರ ಭಾಗವಿದೆ. ಪ್ರತಿಯೊಂದರ ಕೇಂದ್ರ ಭಾಗಕ್ಕೆ ನಾವು ಅಗಾಧ ಪ್ರೀತಿಯಿಂದ ಮಾತನಾಡಿ ಅದರೊಂದಿಗೆ ಸಂಪರ್ಕ ಪಡೆಯಬಹುದೆಂದು ಅವರು ಹೇಳಿದ್ದರು.

ಇಡೀ ಪ್ರಪಂಚದ ಕಲ್ಯಾಣಕ್ಕಾಗಿ ಬಳಸುವ ಈ ಅದ್ಭುತ 'ರಾ' ಚೈತನ್ಯವು ನಮ್ಮಲ್ಲಿ ಇರುವುದಕ್ಕೆ ಗುರೂಜಿಯವರೇ ಕಾರಣವೆಂದು ನಾನು ನಂಬುತ್ತೇನೆ. ಅವರಿಗೆ 'ರಾ' ದೇವರೊಂದಿಗೆ ವಿಶೇಷ ಸಂಬಂಧವಿತ್ತು. 72 ವಿಧದ ಕುಂಡಲಿನೀ ಚೈತನ್ಯಗಳಿವೆ ಎಂದು ಗುರೂಜಿಯವರು ತಿಳಿಸಿದ್ದರು. ಅದರ ಬಗ್ಗೆ ನಮಗೆ ತಿಳಿದೇ ಇರಲಿಲ್ಲ. ಈ ಜ್ಞಾನವನ್ನು ಮೊದಲ ಬಾರಿಗೆ ನಮ್ಮ ಪ್ರಪಂಚವು ಪಡೆದಿದೆಯೆಂದು ನಾನು ತಿಳಿಯುತ್ತೇನೆ. ಈ ಎಲ್ಲ 72 ವಿಧದ ಕುಂಡಲಿನೀ ಚೈತನ್ಯಗಳನ್ನು ಇಲ್ಲಿನ ಕುಂಡಲಿನೀ ಮಂದಿರದ ಕೆಳಗಡೆ ಶೇಖರಿಸಿ ಇಡಲಾಗಿದೆ. ನಮ್ಮ ಶಂಬಲ ತರಗತಿಗಳಿಗೆ, ಶಂಬಲದ ಮಾಸ್ಟರ್‌ಗಳು ನಮಗೆ ದೀಕ್ಷೆ ಕೊಡುವುದಕ್ಕಾಗಿ ಸೂಕ್ಷ್ಮ ರೂಪದಲ್ಲಿ ಬರುತ್ತಾರೆ. ಈ ಕಾಲಘಟ್ಟದಲ್ಲಿ ಪ್ರಪಂಚಕ್ಕೆ ಈ ವಿಷಯಗಳು ತಿಳಿಯದೆ ಇರಬಹುದು. ಆದರೆ ಬಹುಶಃ ಈ ವಿವರಗಳು ಮುಂದಿನ ಪುರಾಣಗಳಲ್ಲಿ ದಾಖಲಾಗುತ್ತದೆ.

ಗುರೂಜಿಯವರನ್ನು ಭೇಟಿಯಾಗಿದ್ದುದು ನಮ್ಮ ಜೀವನದಲ್ಲಿನ ಅತ್ಯಮೂಲ್ಯ ಘಟನೆ. ಅದು ನಮ್ಮ ವಿಧಿಯನ್ನು ಮತ್ತು ಬದುಕಿನೆಡೆಗಿನ ನಮ್ಮ ದೃಷ್ಟಿಕೋನವನ್ನು ಬದಲಾಯಿಸಿತು. ನಮ್ಮ ಬದುಕಿಗೊಂದು ಉನ್ನತ ಉದ್ದೇಶವನ್ನು ಪಡೆದೆವು. ಗುರೂಜಿಯವರನ್ನು ವೈಯಕ್ತಿಕವಾಗಿ ಭೇಟಿಮಾಡಲಾಗದಿದ್ದವರೂ ಕೂಡ ಅವರ ಪುಸ್ತಕಗಳ ಮೂಲಕ, ಅವರು ಕೊಟ್ಟಿರುವ ಜ್ಞಾನದ ಮೂಲಕ, ಅವರು ಬಿಟ್ಟುಹೋಗಿರುವ ಚೈತನ್ಯಗಳ ಮೂಲಕ ಮತ್ತು ಅವರ ಚೈತನ್ಯಗಳು ಲಭ್ಯವಿರುವ ಈ ತರಗತಿಗಳ ಮೂಲಕ ಗುರೂಜಿಯವರನ್ನು ಭೇಟಿಮಾಡಿದ್ದಾರೆ. ಇದು ಅವರ ಬದುಕಿನ ಮೇಲೆ ಮಹತ್ವವಾದ ಪ್ರಭಾವವನ್ನು ಬೀರುತ್ತದೆ. ಇದು ದೇವರಿಗೆ ಅಥವ ಬೆಳಕಿಗೆ ದ್ವಾರವನ್ನು ಕಂಡುಕೊಂಡಂತೆ. ತನ್ನ ಅತ್ಯಂತ ವಿಸ್ಮಯಕಾರಕ ಮತ್ತು ಸುಂದರವಾದ ರೀತಿಗಳಲ್ಲಿ ದೇವರೇ ಈ ಸಂಪರ್ಕಗಳನ್ನು ವ್ಯವಸ್ಥೆಗೊಳಿಸುತ್ತಾನೆ. ಗುರೂಜಿಯವರನ್ನು ನಾವು ಭೇಟಿಯಾದಾಗಲೆಲ್ಲ ಅವರ ಪ್ರೀತಿಯು ನಮ್ಮನ್ನು ಸಂಪೂರ್ಣವಾಗಿ ಆವರಿಸಿ ನಮ್ಮನ್ನು ಉನ್ನತ ವಲಯಕ್ಕೆ ಕೊಂಡೊಯ್ಯುತ್ತಿತ್ತು. ಅದು ದೇವರನ್ನೆ ಅನುಭವಿಸಿದ ಹಾಗಿರುತ್ತಿತ್ತು. 'ಏನನ್ನಾದರೂ ಕಲಿಯಬೇಕೆಂಬ ಅತ್ಯಂತ ಪ್ರಾಮಾಣಿಕ ಬಯಕೆ ನಮ್ಮಲ್ಲಿದ್ದರೆ, ಅದನ್ನು ಕಲಿಸಲು ವ್ಯಕ್ತಿಯೊಬ್ಬನ ವ್ಯವಸ್ಥೆಯನ್ನು ದೇವರೇ ಮಾಡುತ್ತಾನೆ,' ಎಂದು ಹೇಳಿದ್ದು ಗುರೂಜಿಯವರೇ. ಇದು ಎಷ್ಟೊಂದು ಸುಂದರ ವಿಷಯ!

ಸತ್ಯಕ್ಕೆ ತನ್ನದೇ ಆದ ಶಕ್ತಿಯಿದೆಯೆಂದು ಹೇಳಿದರು. ಸತ್ಯವನ್ನು ನುಡಿದರೆ ಸಾಕು ಅದು ಬೇರೆಯವರನ್ನು ತಲುಪುತ್ತದೆ. ಅದೇ ರೀತಿ ಶುದ್ಧತೆಗೂ ತನ್ನದೇ ಆದ ಶಕ್ತಿಯಿದೆಯೆಂದು ಅವರು ಹೇಳಿದರು. ನಾವು ಶುದ್ಧರಾಗಿದ್ದರೆ ದೇವರ ಸಂಪರ್ಕದಲ್ಲಿರುತ್ತೇವೆ; ದೇವರ ಶಕ್ತಿ ನಮ್ಮ ಮೂಲಕ ಕೆಲಸ ಮಾಡುತ್ತದೆ. ಇಂತಹ ಆಳವಾದ ಸತ್ಯಗಳನ್ನು ಅವರು ಇಂತಹ ನೇರವಾದ ಮತ್ತು ಸರಳವಾದ ವಿಧಾನಗಳಲ್ಲಿ ತಿಳಿಸಿದರು.

ಸಾಹಿತ್ಯ, ಸಂಗೀತ, ಚಲನಚಿತ್ರಗಳು ಮುಂತಾದ ಕ್ಷೇತ್ರಗಳಲ್ಲೂ ಅತ್ಯುತ್ತಮವಾದವುಗಳನ್ನು ಅವರು ನಮಗೆ ಪರಿಚಯಿಸಿದರು. ಮೊದಲಿಗೆ ಅವರು ಪರಿಪೂರ್ಣ ಮಾನವ. 'ಮೊದಲು ಮಾನವನಾಗು ನಂತರ ದೈವವಾಗು,' ಎಂದು ಅವರು ಹೇಳಿದರು. ಅತ್ಯದ್ಭುತವಾದ ಮತ್ತು ಅತಿ ಸುಂದರವಾದ ಮಾನವ ಜೀವನವನ್ನು ನಾವು ಅನುಭವಿಸಬೇಕೆಂದು ಅವರು ಹೇಳಿದರು. ಈ ಪ್ರಪಂಚದಲ್ಲಿನ ಅತ್ಯುತ್ತಮವಾದವುಗಳಿಗೆ ಅವರು ಯಾವಾಗಲೂ ಸಂಪರ್ಕಗೊಳ್ಳುತ್ತಿದ್ದರು. ನಮ್ಮಲ್ಲಿನ ಅತ್ಯುತ್ತಮವಾದುದಕ್ಕೆ, ಅಂದರೆ ಆತ್ಮಕ್ಕೆ, ಅವರು ಸಂಪರ್ಕಗೊಳ್ಳುತ್ತಿದ್ದರು. ಆದ್ದರಿಂದಲೇ ಅವರ ಜೊತೆಯಲ್ಲಿದ್ದಾಗ ನಾವು ಪೂರ್ಣವಾಗಿ ಸಕಾರಾತ್ಮಕರಾಗಿರುತ್ತಿದ್ದೆವು. ಅವರ ಜೊತೆಯಲ್ಲಿದ್ದಾಗ ನಾವು ದೇವರೇ ಎನ್ನುವ ಅನುಭವವಾಗುತ್ತಿತ್ತೆಂದು ಹೇಳಬಯಸುತ್ತೇನೆ.

ನಮಗೆ ಮಹರ್ಷಿ ಅಮರರವರನ್ನು ಮತ್ತು ಋಷಿಗಳನ್ನು ಪರಿಚಯಿಸಿದ್ದು ಅವರ ಅತಿಮುಖ್ಯ ಕೊಡುಗೆಯಾಗಿದೆ. ಅವರ ಬಗ್ಗೆ ನಮಗೆ ತಿಳಿಸಿದ್ದು ಮುಖ್ಯ, ಆದರೆ ಅವರೊಂದಿಗಿನ ಸಂಪರ್ಕವನ್ನು ಜೀವಂತವಿಡುವುದಕ್ಕಾಗಿ ಅವರನ್ನು ಅಭಿವ್ಯಕ್ತಿಸುವುದು ಅತಿಮುಖ್ಯವಾಗಿತ್ತು. ಇದನ್ನು ನಮಗಾಗಿ ಮಾಡಿದ್ದಕ್ಕಾಗಿ ನಾವು ಗುರೂಜಿಯವರಿಗೆ ಕೃತಜ್ಞರಾಗಿರಬೇಕು.

ಅವರ ಮತ್ತೊಂದು ಬಹು ಮುಖ್ಯವಾದ ಕೊಡುಗೆಯೆಂದರೆ, 'ಲೈಟ್ ಚಾನಲ್ಸ್ ವಿಶ್ವ ಸಂಚಲನ'ವನ್ನು ನಮಗೆ ಉಡುಗೊರೆಯಾಗಿ ಕೊಟ್ಟಿದ್ದು. ಈಗಾಗಲೇ 3 ಮಿಲಿಯನ್‌ಗೂ ಹೆಚ್ಚು ಜನರು ಬೆಳಕನ್ನು ಚಾನಲ್ ಮಾಡುತ್ತಿದ್ದಾರೆ ಮತ್ತು ಹೊಸ ಯುಗದೆಡೆಗಿನ ಈ ಸಂಚಲನಕ್ಕೆ ಸಹಾಯ ಮಾಡುತ್ತಿದ್ದಾರೆ. ಲೈಟ್ ಚಾನಲಿಂಗ್ ಇರುವುದು ಎಲ್ಲರಿಗಾಗಿ, ಎಲ್ಲ ಧರ್ಮದವರೂ ಇದನ್ನು ಅಭ್ಯಾಸ ಮಾಡಬಹುದು. ಇದು ಎಷ್ಟೊಂದು ದೊಡ್ಡ ವಿಚಾರವೆಂದು ನಾನದರ ಬಗ್ಗೆ ಯೋಚಿಸುತ್ತಿದ್ದೆ. ಇದರ ಅಭ್ಯಾಸವು ವಿಶ್ವ ಮಟ್ಟದಲ್ಲಿ ಬದಲಾವಣೆಯನ್ನು ತರುತ್ತದೆ. ಶಾಲಾ ಮಕ್ಕಳು ಇದಕ್ಕೆ ಅತ್ಯುತ್ತಮ ಉದಾಹರಣೆ. ಅವರು ಎಷ್ಟೊಂದು ಪ್ರಾಮಾಣಿಕವಾಗಿ ಇದನ್ನು ಅಭ್ಯಾಸ ಮಾಡುತ್ತಿದ್ದಾರೆ ಮತ್ತು ಅವರಿಗೆ ಎಂತಹ ಅಧ್ಭುತವಾದ ಅನುಭವಗಳಾಗುತ್ತಿವೆ! ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು – ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫೀಯು ರೂ. 4500. ಈ ಫೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀಯು ರೂ. 3500. ಈ ಫೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

26–11–2017 (ಮುಂದುವರಿದ ಭಾಗ)

ಗುರೂಜಿಯವರು ಅನೇಕ ವರ್ಷ ಅವಿಶ್ರಾಂತವಾಗಿ ಕೆಲಸ ಮಾಡಿದ್ದಾರೆ. ಪ್ರತಿ ಭಾನುವಾರದ ತರಗತಿಗಳಲ್ಲಿ ಒಂದು ತರಗತಿಯನ್ನೂ ತಪ್ಪಿಸದಂತೆ ಅವರು ಸುಮಾರು 25 ವರ್ಷಗಳು ಮಾತನಾಡಿದ್ದಾರೆ. ಅವರ ಎಲ್ಲ ಉಪನ್ಯಾಸಗಳನ್ನೂ ಪ್ರಕಟಿಸಿಲ್ಲ. ಅವುಗಳನ್ನು ಪ್ರಕಟಿಸುವ ಪ್ರಕ್ರಿಯೆ ನಡೆಯುತ್ತಿದೆ. ಅವರ ಅಪ್ರಕಟಿತ ಉಪನ್ಯಾಸಗಳನ್ನು, 'Thus Spoke Guruji' ಪುಸ್ತಕಗಳ ಸರಣಿಯಲ್ಲಿ ಮುಂದಿನ ಸಂಚಿಕೆಯನ್ನು ಬಹುಶಃ ಆರು ತಿಂಗಳಾದ ನಂತರ ಹೊರತರುತ್ತೇವೆ. ಈಗಾಗಲೇ ನಾವು ಎರಡು ಸಂಚಿಕೆಯನ್ನು ಪ್ರಕಟಿಸಿದ್ದೇವೆ.

ಬಹಳ ಅಸ್ವಸ್ಥತೆ ಮತ್ತು ನೋವನ್ನು ಅನುಭವಿಸುತ್ತಿದ್ದ ಅವರ ಕೊನೆಯ ದಿನಗಳಲ್ಲಿ ಕೂಡ ಅನೇಕ ವಿಷಯಗಳನ್ನು ನಮಗೆ ಕಲಿಸಿದರು. ತಪೋನಗರ ನಿವಾಸಿಗಳು ಒಟ್ಟಿಗೆ ಸೇರಿ ದೀಪಾವಳಿಯಂತಹ ಕೆಲವು ಹಬ್ಬಗಳನ್ನು ಆಚರಿಸುತ್ತಾರೆ. 2012ನೇ ಇಸವಿಯ ದೀಪಾವಳಿಯಂದು ಗುರೂಜಿಯವರು ಬಹಳ ಅಸ್ವಸ್ಥರಾಗಿದ್ದರು. ಅವರು ಅಷ್ಟೊಂದು ಅಸ್ವಸ್ಥರಾಗಿದ್ದರೂ ಕೂಡ ದೀಪಾವಳಿ ಆಚರಣೆಯಲ್ಲಿ ಭಾಗವಹಿಸಿದ್ದನ್ನು ಧ್ಯಾನಿಯಲ್ಲದ ಆದರೆ ತಪೋನಗರದಲ್ಲಿ ವಾಸವಾಗಿರುವ ನಿವಾಸಿಯೊಬ್ಬರು ಗಮನಿಸಿದರು. ಮಾರನೆಯ ದಿನವೇ ಅವರನ್ನು ಆಸ್ಪತ್ರೆಗೆ ಸೇರಿಸಲಾಯಿತು. 'ಏನೇ ಬರಲಿ ಬದುಕಿನ ಸಂಭ್ರಮ ಮುಂದುವರಿಯಲೇ ಬೇಕು' ಎನ್ನುವ ಸಂದೇಶವನ್ನೇ ಅವರು ಸಾರಬಯಸಿದ್ದರು. ಇದನ್ನು ಗಮನಿಸಿದವರು ಧ್ಯಾನಿಯಲ್ಲದವ–ರೊಬ್ಬರು, ಅವರೊಂದಿಗೆ ಸಂಭಾಷಿಸಲು ನನಗೆ ಬಹಳ ಸಂತೋಷವೆನಿಸಿತು.

ಗುರೂಜಿಯವರು ಇಲ್ಲೊಂದು 'ಬೆಳಕಿನ ನಗರ'ವನ್ನು ನೋಡಬಯಸಿದರು. ಅದಕ್ಕಾಗಿ ಅವರು ತಮ್ಮಲ್ಲಿದ್ದ ಎಲ್ಲವನ್ನೂ ಧಾರೆಯೆರೆದರು – ಜ್ಞಾನ, ಚೈತನ್ಯಗಳು, ಮಾರ್ಗಸೂಚಿಗಳು, ಅವಕಾಶಗಳು, ಬೇರೆ ಎಲ್ಲವನ್ನೂ ಕೊಟ್ಟರು. ಬೆಳಕಿನ ನಗರ ಬಹಳ ದೊಡ್ಡ ವಿಚಾರದಂತೆ ಕಾಣಿಸಬಹುದು. ಆದರೆ ಮಾಸ್ಟರ್‌ಗಳು ಅಂತಹ ಕನಸನ್ನು ಕೊಟ್ಟಾಗ, ಅದು ಸಾಧ್ಯವಿರಲೇಬೇಕು. ಅಲ್ಲದಿದ್ದರೆ ಅಂತಹ ಕನಸನ್ನೇಕೆ ಕೊಡುತ್ತಿದ್ದರು? ತಪೋನಗರದಲ್ಲಿನ ಜನರು ಬೆಳೆಯುತ್ತಿದ್ದಾರೆ. ಸಹಜವಾಗಿಯೇ ಅವರಲ್ಲಿ ಅಪರಿಪೂರ್ಣತೆ –ಗಳಿವೆ, ಆದರೆ ಇಲ್ಲಿ ಬೆಳಕಿನ ನಗರವನ್ನು ಸ್ಥಾಪಿಸುವ ಪ್ರಾಮಾಣಿಕ ಪ್ರಯತ್ನವಿದೆ. ನಾವು ಸಫಲರಾಗಬಹುದು ಆಗದಿರಬಹುದು, ಆದರೆ ನಾವು ಮಾಡುವ ಪ್ರಾಮಾಣಿಕ ಪ್ರಯತ್ನ ಅತಿ ಮುಖ್ಯ. ನಾವದನ್ನು ಮಾಡಬೇಕು. ಸಮುದಾಯದ ಚಟುವಟಿಕೆಗಳು ಜನರ ನಡುವೆ ಒಂದು ರೀತಿಯ ಬಾಂಧವ್ಯವನ್ನು ಹೊಂದಲು ಸಹಾಯಮಾಡುತ್ತಿರುವುದನ್ನು ನಾನು ಕಾಣುತ್ತಿದ್ದೇನೆ. ಪ್ರಾರಂಭದಲ್ಲಿ ನಾವು ಸೋಲಬಹುದು ಆದರೆ ನಾವು ಮತ್ತೆ ಮತ್ತೆ ಪ್ರಯತ್ನಿಸುತ್ತೇವೆ. ಅದನ್ನೇ ನಾವು ನಮ್ಮ ಮಾಸ್ಟರ್‌ಗಳಿಂದ ಕಲಿತಿರುವುದು. ವಿಶ್ವಾಮಿತ್ರ ಮಹರ್ಷಿಯವರ ಬಗ್ಗೆ ಗುರೂಜಿಯವರು ಹೇಳುತ್ತಿದ್ದರು. ಅವರು ಸೋಲುತ್ತಿದ್ದರು ಆದರೆ ಪುನಃ ಪ್ರಯತ್ನಿಸುತ್ತಿದ್ದರು, ಅದು ಸಾವಿರ ಬಾರಿಯಿರಬಹುದು ಅಥವ ಲಕ್ಷಾಂತರ ಬಾರಿಯಾಗಿರಬಹುದು. ಇಲ್ಲಿ ಅದ್ಭುತ ಜನರು ವಾಸವಾಗಿದ್ದಾರೆ, ನಾವು ಪ್ರಯತ್ನಿಸುತ್ತಲೇ ಇರುತ್ತೇವೆ. ಈ ಕನಸಿನೆಡೆಗೆ ನಾವು ಚಲಿಸುತ್ತೇವೆಂಬ ನಂಬಿಕೆ ನನಗಿದೆ. ಹೊಸಯುಗದೆಡೆಗಿನ ಸ್ಥಿತ್ಯಂತರವು ಸವಾಲುಗಳನ್ನು ಎದುರಿಸಲೇ ಬೇಕಿದೆ. ಆದರೆ ಹೊಸಯುಗವು ನೆರವೇರಲೇ ಬೇಕಾದ ವಿಧಿ, ಏಕೆಂದರೆ ಅದಕ್ಕಾಗಿ ಋಷಿಗಳು ಕೆಲಸ ಮಾಡುತ್ತಿದ್ದಾರೆ. ಅವರು ಅದಕ್ಕಾಗಿ ಕೆಲಸ ಮಾಡಿದರೆ ಅದು ಸಂಭವಿಸಿಯೇ ತೀರುತ್ತದೆ. ನಾವೂ ಅಲ್ಲಿ ಇರಬೇಕೇ ಬೇಡವೇ ಎನ್ನುವುದನ್ನು ನಾವೇ ಆರಿಸಿಕೊಳ್ಳಬೇಕು.

ಈ ಸ್ಥಳವನ್ನು ಅಚ್ಚುಕಟ್ಟು ಮತ್ತು ಶುದ್ಧ ಮಾಡುವುದರಲ್ಲಿ ಮತ್ತು ಹೂವಿನ ಅಲಂಕಾರ ಮಾಡುವುದರಲ್ಲಿ ತೊಡಗಿಕೊಂಡಿದ್ದ ವಾಲಂಟಿಅರ್‌ಗಳಿಗೆ ನನ್ನ ಕೃತಜ್ಞತೆ ಅರ್ಪಿಸಲು ಬಯಸುತ್ತೇನೆ. ಪ್ರಸಾದವನ್ನು ತಯಾರಿಸಲು ಭಾಗವಹಿಸಿದ್ದ ಎಲ್ಲರಿಗೂ ನನ್ನ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಅವರು ಮುಂಜಾನೆಯೇ ಎದ್ದು ಕೆಲಸ ಮಾಡಿದ್ದಾರೆ. ಧ್ವನಿ ವ್ಯವಸ್ಥೆ ಮತ್ತು ವೆಬ್‌ಕಾಸ್ಟ್‌ನಲ್ಲಿ ತೊಡಗಿದ್ದ ಕಾರ್ಯಕರ್ತರಿಗೂ ನನ್ನ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಈ ಎಲ್ಲರಿಂದಾಗಿಯೇ ನಾವಿಲ್ಲಿ ಆರಾಮವಾಗಿ ಕುಳಿತು ಧ್ಯಾಮಾಡಲು ಸಾಧ್ಯವಾಗಿದೆ. ನಮ್ಮ ಕೆಲಸದಲ್ಲಿ ಭಾಗವಹಿಸುತ್ತಿರುವ ಎಲ್ಲರಿಗೂ ಹಾಗೂ ಗುರೂಜಿಯವರ ಅತಿ ಮುಖ್ಯ ಕೆಲಸವನ್ನು ಮುಂದುವರೆಸುವುದರಲ್ಲಿ ಭಾಗವಹಿಸುತ್ತಿರುವ ಮತ್ತು ಬೆಂಬಲ ನೀಡುತ್ತಿರುವ ಎಲ್ಲ ವಿದ್ಯಾರ್ಥಿಗಳಿಗೂ ನನ್ನ ಕೃತಜ್ಞತೆಗಳು. ಇದು ಬಹು ದೊಡ್ಡ ಜವಾಬ್ದಾರಿಯಾಗಿದ್ದು ಎಲ್ಲರ ಬೆಂಬಲವಿಲ್ಲದೆ ಕೆಲಸ ಮುಂದುವರೆಯುವುದಿಲ್ಲ. ಧನ್ಯವಾದಗಳು. ■

## ಪ್ರಶ್ನೆಗಳು ಮತ್ತು ಉತ್ತರಗಳು

ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ

**ಪ್ರ: ಅಪ್ರೀತಿ ಎಂದರೇನು?**

ಉ: ನಮ್ಮನ್ನು ದೇವರಿಂದ ಮತ್ತು ಗುರುವಿನಿಂದ ದೂರ ಮಾಡುವ ಎಲ್ಲವೂ ಅಪ್ರೀತಿಯೇ. ಕೋಪ, ಹೊಟ್ಟೆಕಿಚ್ಚು, ಸಂಕುಚಿತ ಬುದ್ಧಿ ಇವೆಲ್ಲವೂ ಅಪ್ರೀತಿಯೇ. ಅನ್ಯಾಯದಿಂದಿರುವುದೂ ಅಪ್ರೀತಿಯೇ.

**ಪ್ರ: ನಮ್ಮ ಪ್ರೀತಿಯನ್ನು ಹೆಚ್ಚಿಸಿಕೊಳ್ಳುವುದು ಹೇಗೆ?**

ಉ: ಇದಕ್ಕೆ ಯಾವುದೇ ಟೆಕ್ನಿಕ್ ಇಲ್ಲ. ಅದು ನಿಮ್ಮ ಉದ್ದೇಶಿತ ನಿರ್ಧಾರ. ಹೆಚ್ಚು ಪ್ರೀತಿಸಬೇಕೆಂದು ನೀವು ಬಯಸಿದರೆ ಹಾಗೆಯೇ ಮಾಡುತ್ತೀರಿ. ಆದರೆ ಇದಕ್ಕೊಂದು ವಿಶೇಷ ದಾರಿಯಿದೆಯೆಂದು ಋಷಿಗಳು ಹೇಳುತ್ತಾರೆ. ನೀವು ನಿಮ್ಮ ಅರಿವನ್ನು ವಿಸ್ತರಿಸಿಕೊಳ್ಳಬೇಕು. ಧ್ಯಾನದಿಂದ ಮಾತ್ರ ಇದು ಸಾಧ್ಯವಾಗುತ್ತದೆ. ಹೀಗೆ ಮಾಡಲು ನಮಗೆ ಸಾಧ್ಯವಾದರೆ, ನಾವು ಕೂಡ ಹೆಚ್ಚು ಪ್ರೀತಿಸಬಹುದು, ಹೆಚ್ಚು ಪ್ರೀತಿಯನ್ನು ಅಭಿವ್ಯಕ್ತಿಸಬಹುದು.

**ಪ್ರ: ಒಬ್ಬ ವಿದ್ಯಾರ್ಥಿ, ತನ್ನ ವೈಯಕ್ತಿಕ ಮಾರ್ಗದರ್ಶನದ ಬಗ್ಗೆ ಗುರುವನ್ನು ನೆನಪಿಸಬಹುದೇ?**

ಉ: ಗುರುವನ್ನು ನೆನಪಿಸಬಹುದು. ಆದರೆ ಯಾವಾಗ ಮತ್ತು ಯಾರಿಗೆ ಮಾರ್ಗದರ್ಶಿಸಬೇಕೆಂದು ಗುರುವಿಗೆ ಗೊತ್ತಿರುತ್ತದೆ.

**ಪ್ರ: ನಾನು ನಿಮ್ಮ ಸಂಪರ್ಕವನ್ನು ಕಲ್ಪಿಸಿಕೊಂಡಾಗ, ನಿಮಗೆ ತೊಂದರೆ ಕೊಡುತ್ತಿರುತ್ತೇನೆಯೇ?**

ಉ: ಇಲ್ಲ. ನೀವು ನನ್ನೊಡನೆ ಸಂಪರ್ಕಗೊಂಡಾಗ, ಆ ಸಂಪರ್ಕ ಬೇರೊಂದು ಮಟ್ಟದಲ್ಲಾಗುತ್ತದೆ. ಆ ಮಟ್ಟದಲ್ಲಿ ಏಕಕಾಲಕ್ಕೆ ಎಷ್ಟು ಜನರು ಬೇಕಾದರೂ ಸಂಪರ್ಕಿಸಬಹುದು. ಅನೇಕ ವೇಳೆ ಅವರೆಲ್ಲರೂ ಪ್ರತ್ಯುತ್ತರವನ್ನು ಪಡೆಯುತ್ತಾರೆ. ಅವರು ಹೀಲಿಂಗ್‌ಗಾಗಿ ಕೇಳಿದ್ದರೆ, ತಕ್ಷಣವೇ ಅವರು ನನ್ನಿಂದ ಹೀಲಿಂಗ್ ಚೈತನ್ಯಗಳನ್ನು ಪಡೆದುಕೊಳ್ಳುತ್ತಾರೆ. ನೀವು ಯಾವುದೇ ಸಹಾಯವನ್ನು ಕೋರಿ ಪತ್ರ ಬರೆಯಲು ಯೋಚಿಸಿದಾಗಲೇ ಆ ಸಂದೇಶವು ಬೇರೊಂದು ಮಟ್ಟದಲ್ಲಿ ನನಗೆ ತಲುಪುತ್ತದೆ. ಈ ಮಟ್ಟದಲ್ಲಿ ನನಗೆ ಇವುಗಳ ಅರಿವು ಇರುವುದಿಲ್ಲ. ಆದರೆ ನನಗೆ ತಿಳಿದುಕೊಳ್ಳಬೇಕೆನಿಸಿದಾಗ ನನ್ನ ಅಂತರಾಳದೊಳಗೆ ಹೋಗಿ ತಿಳಿದುಕೊಳ್ಳಬಹುದು. ಕೆಲವು ವೇಳೆ ಈ ಸಂಪರ್ಕಗಳು ಗಾಢವಾಗಿರುತ್ತವೆ, ಮತ್ತು ಸಮಸ್ಯೆಗಳು ಬಹಳ ತೀವ್ರವಾಗಿರುತ್ತವೆ. ಅಂಥ ಸಮಯಗಳಲ್ಲಿ ನಾನು ಇದ್ದಕ್ಕಿದ್ದಂತೆ ಆ ವ್ಯಕ್ತಿಯ ಬಗ್ಗೆ ಯೋಚಿಸಲಾರಂಭಿಸುತ್ತೇನೆ. ಕೆಲವೊಮ್ಮೆ ನಾನು ಧ್ಯಾನಕ್ಕೆ ಕುಳಿತು, ಆ ವ್ಯಕ್ತಿಗೆ ಏನು ಸಮಸ್ಯೆಯಾಗಿದೆಯೆಂದು ನೋಡಲು ಪ್ರಯತ್ನಿಸುತ್ತೇನೆ, ಋಷಿಗಳನ್ನು ಪ್ರಾರ್ಥಿಸಿ ಆ ಸಮಸ್ಯೆಯನ್ನು ನಿವಾರಿಸುತ್ತೇನೆ.

**ಪ್ರ: ಹೊಸ ಯುಗಕ್ಕಾಗಿ ಮನಸ್ಸು ಮತ್ತು ಬುದ್ಧಿಯನ್ನು ಬದಲಾಯಿಸಿಕೊಳ್ಳಲು ನಾವು ದೈವೀ ಲೋಕಗಳಿಗೆ ಹೋಗಬೇಕೇ?**

ಉ: ಕಲಿಯುಗದಲ್ಲಿ ನಮಗೆ ಒಂದು ಬಗೆಯ ಮನಸ್ಸು ಇರುತ್ತದೆ. ನಾವು ಸತ್ಯ ಯುಗವನ್ನು ಪ್ರವೇಶಿಸಿದಾಗ ಈ ಮನಸ್ಸನ್ನು ತೆಗೆದುಹಾಕಲಾಗುತ್ತದೆ. ಹೊಸ ಮನಸ್ಸನ್ನು ನೀಡಲಾಗುತ್ತದೆ. ನಾವು ಶರೀರಗಳನ್ನು ತೊರೆದ ನಂತರ ವಿಶ್ರಾಂತಿ ಸ್ಥಳಗಳಿಗೆ ಹೋಗುತ್ತೇವೆ. ಇಂಥ ಸ್ಥಳಗಳಲ್ಲಿ ಈ ಕೆಲಸ ನಡೆಯುತ್ತದೆ. ಕೇವಲ ಮನಸ್ಸನ್ನು ಮಾತ್ರ ಬದಲಾಯಿಸಲಾಗುತ್ತದೆಯೇ ಹೊರತು ಬುದ್ಧಿಯನ್ನಲ್ಲ. ಇದು ನಾವು ಹೊಸದಾಗಿ ಪಡೆದ ಬಹಳ ಮುಖ್ಯವಾದ ಮತ್ತು ಸುಂದರವಾದ ವಿಷಯ.

**ಪ್ರ: ಸಪ್ತ ಋಷಿಗಳು, ವೈಟ್ ಬ್ರದರ್‌ಹುಡ್ ಒಂದೇ ಆಗಿದ್ದಾರೆಯೇ?**

ಉ: ಥಿಯೋಸಾಫಿಸ್ಟ್‌ಗಳು ವೈಟ್ ಬ್ರದರ್‌ಹುಡ್ ಬಗ್ಗೆ ಹೇಳುತ್ತಾರೆ. ಅನೇಕ ತಂಡಗಳಿವೆ. ಸಪ್ತ ಋಷಿಗಳು ಮತ್ತೊಂದು ತಂಡವಷ್ಟೇ ಅಲ್ಲ. ಸಪ್ತ ಋಷಿಗಳು ನಮ್ಮ ಭೂಮಿಯಂತಹ ಮಿಲಿಯಾಂತರ ಭೂಮಿಗಳನ್ನು ಹೊಂದಿರುವ ಭೂಲೋಕಕ್ಕೆ ಕಾರ್ಯನಿರ್ವಾಹಕರಾಗಿದ್ದಾರೆ. ಅವರು ಮಾಸ್ಟರ್‌ಗಳು. ಈ ಭೂಮಿ ಮೇಲೆ ಯಾವುದೇ ಒಳ್ಳೆಯ ಅಥವಾ ಕೆಟ್ಟ ಘಟನೆ ಸಂಭವಿಸಬೇಕಾದರೂ ಅವರ ಅನುಮತಿ ಬೇಕಾಗುತ್ತದೆ. ಅವತಾರಗಳು ಸಹ ಸಪ್ತ ಋಷಿಗಳ ಸಲಹೆ ಕೇಳುತ್ತಾರೆ. ಅವರನ್ನು ನಾವು ಅರ್ಥ ಮಾಡಿಕೊಳ್ಳಬೇಕಿದೆ.

**ಪ್ರ: ಮೈತ್ರೇಯ ಮತ್ತು ಕಲ್ಕಿ ದೇವ ಇಬ್ಬರೂ ಒಬ್ಬರೇ?**

ಉ: ಅಲ್ಲ. ಮೈತ್ರೇಯ ಶಂಬಲದ ರಾಜ. ಕಲ್ಕಿ ದೇವ ಮಹಾ ವಿಷ್ಣುವಿನ ಹತ್ತನೇ ಅವತಾರ. ಕಲ್ಕಿ ದೇವನು ಶಂಬಲದಲ್ಲಿ ವಾಸವಾಗಿದ್ದಾನೆ. ಇಬ್ಬರೂ ಬೇರೆ ಬೇರೆ ವ್ಯಕ್ತಿಗಳು.

**ಪ್ರ: ನಾವು ದೇವರನ್ನು ಪೂಜಿಸುವಾಗ, ಚೈತನ್ಯಗಳನ್ನು ಬೆಳಕಿನ ಚೆಂಡಿನ ಆಕಾರದಲ್ಲಿ ಸಂಗ್ರಹಿಸುವುದರ ಬದಲಾಗಿ ಪಿರಮಿಡ್ ಆಕಾರದಲ್ಲಿ ಸಂಗ್ರಹಿಸಬಹುದೇ?**

ಉ: ನೀವು ಸ್ವತಂತ್ರರು. ನೀವು ಪಿರಮಿಡ್ ಆಕಾರದಲ್ಲಿ ಸಂಗ್ರಹಿಸಬಹುದು. ಪರಿಮಾಣ ಮುಖ್ಯವಲ್ಲ, ನೀವು ಎಷ್ಟು ಪ್ರೀತಿಯನ್ನು ಹೊಂದಿದ್ದೀರಿ ಎನ್ನುವುದು ಮುಖ್ಯ. ನೀವು ಚೈತನ್ಯಗಳನ್ನೂ ಅರ್ಪಿಸಬೇಕಿಲ್ಲ.


**ಪ್ರ: ಧ್ಯಾನ ಪ್ರಾರಂಭಿಸುವ ಮೊದಲು ಕರ್ಪೂರ ಉರಿಸುವುದರ ಹಿಂದಿನ ವೈಜ್ಞಾನಿಕ ಕಾರಣವೇನು?**

ಉ: 'ಧ್ಯಾನ ಮಾಡುವುದು ಹೇಗೆ', ಪುಸ್ತಕದಲ್ಲಿ ನಾವಿದನ್ನು ವಿವರಿಸಿದ್ದೇವೆ. ಇದು ಧ್ಯಾನ ಮಾಡಲು ಸುಂದರವಾದ ವಾತಾವರಣವನ್ನು ಸೃಷ್ಟಿಸುತ್ತದೆ. ಇದೇ ವೈಜ್ಞಾನಿಕ ಕಾರಣ. ■


### ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| Thus Spoke Guruji Krishnananda - Vol 1 | 200/- |
| Thus Spoke Guruji Krishnananda - Vol 2 | 250/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

Published: 21st of Every Month. RNI. No. KARKAN/2003/13739 Regd. Postal Regn. No. KARN/BGE/1124/ 2017-2019
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



ಗುರೂಜಿ ಕೃಷ್ಣಾನಂದ (1939 - 2012)

## ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

# ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ನಾನು ಧ್ಯಾನದಲ್ಲಿ ಅಸ್ತಿತ್ವ ಕಳೆದುಕೊಂಡು ಅಸೀಮ ವಿಸ್ತಾರದ ಅನುಭವವನ್ನು ಹಾಗೂ ಎಲ್ಲಾ ಆಕಾರಗಳೊಂದಿಗೆ ಅದಕ್ಕಿರುವ ಸಂಬಂಧವನ್ನೂ ನೋಡುತ್ತೇನೆ. ಎಲ್ಲವೂ ಪ್ರಜ್ಞೆಯ ಇರುವಿಕೆ ಎಂಬಂತೆ ಭಾಸವಾಗುತ್ತದೆ. ನಾನು ಒಂದು ಕಣದಂತೆ ಅಥವ ಸ್ವಸಂಪೂರ್ಣದಂತೆ ನನಗೆ ಅನುಭವವಾಗುತ್ತದೆ.

– ಹರೀಶ್.ಎಂ.ಆರ್

ಕಳೆದ ಮೂರು ತಿಂಗಳುಗಳಿಂದ ನಾನು ಧ್ಯಾನ ಮಾಡುವಾಗ ವಿಸ್ತಾರದ ಅನುಭವವಾಗುತ್ತದೆ ಅದರ ಜೊತೆಗೆ ಹೃದಯದ ಬಡಿತ ಕೆಲವು ಸಮಯದವರೆಗೆ ಜೋರಾಗಿ ನಂತರ ಸಹಜ ಸ್ಥಿತಿಗೆ ಬರುತ್ತದೆ.

ಪ್ರಳಯದ ಪ್ರಭಾವ ಯವಾಗಲೂ ಕಂಡುಬರುತ್ತದೆ. ಆದರೆ ನನ್ನನ್ನು ನಾನು ಸಂಬಾಳಿಸಿಕೊಳ್ಳಲು ಸಾಧ್ಯವಾಗಿದೆ, ಮುಖ್ಯವಾಗಿ ಮನೆಯಲ್ಲಿ ಅತ್ಯಂತ ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳುವಾಗ.

– ನಂದಿತಾ ಪಟೇಲ್

ನನಗೆ ಧ್ಯಾನ ಮಾಡುವುದರಲ್ಲಿ ಅತ್ಯಂತ ಆಸಕ್ತಿ. ಕೆಲವೊಮ್ಮೆ ಕೆಲಸದಲ್ಲಿ ನಿರತಳಾಗಿ ಧ್ಯಾನ ಮಾಡಲು ಸಮಯ ಸಿಗದಿದ್ದಾಗ, ನಾನು ಕುಳಿತು ಭಗವಂತನೊಂದಿಗೆ ಸಂಪರ್ಕ ಕಲ್ಪಿಸಿಕೊಳ್ಳಲು ಸಾಧ್ಯವಾಗುವ ಸಮಯಕ್ಕಾಗಿ ಕಾತುರದಿಂದ ಕಾಯುತ್ತೇನೆ. ಕೆಲವೊಮ್ಮೆ ಕೆಲವೇ ನಿಮಿಷಗಳಾದರೂ ಸಾಕು; ಗುರೂಜಿಯವರು ಕೊಟ್ಟಿರುವ ಯಾವುದಾದರೊಂದು ತಂತ್ರವನ್ನು ಪಾಲಿಸಿದಾಗ ಋಷಿಗಳು ನನ್ನನ್ನು ಉನ್ನತ ಮಟ್ಟಕ್ಕೆ ತೆಗೆದುಕೊಂಡುಹೋಗಿ ಒಂದು ಗಂಟೆಯ ಧ್ಯಾನದ ಅನುಭವವನ್ನು ನೀಡುತ್ತಾರೆ!

– ವಿದ್ಯಾ ವೀರ್ಕರ್

ಸಪ್ತಋಷಿ ಧ್ಯಾನ ಮಾರ್ಗವನ್ನು ಸೇರುವ ಮೊದಲು ನಾನು ಅನೇಕ ರೀತಿಯ ಸತ್ಸಂಗಗಳಿಗೆ ಹೋಗಿದ್ದೇನೆ. ಆದರೂ ಋಷಿಗಳು ಹಾಗೂ ಈ ಮಾರ್ಗದ ಬಗ್ಗೆ ನಾನು ಅತ್ಯಂತ ಪ್ರೀತಿ ಹಾಗೂ ಆಳವಾದ ಸಂಬಂಧ ಮತ್ತು ಬದ್ಧತೆಯನ್ನು ಹೊಂದಿದ್ದೇನೆ. ಋಷಿಗಳೇ ನನ್ನ ಜೀವನದ ಗುರಿ ಎಂದು ಈಗ ನನಗೆ ಅರ್ಥವಾಗಿದೆ.

– ಪುಂಡಲೀಕ ಧಾಕೋರ್ಕರ್

ಈಗ ನಾನು ಧ್ಯಾನಮಾಡಲು ಸಮಯವನ್ನು ಮೀಸಲಾಗಿಟ್ಟಿದ್ದೇನೆ. ಉಳಿದ ಸಮಯ ನನ್ನಲ್ಲಿ ಬೆಳಕನ್ನು ಹೊಂದಿರುತ್ತೇನೆ. ನಾನು ನನ್ನ ಮನೆಯ ಕೆಲಸದಲ್ಲಿ ಮತ್ತು ಹೊರಗಿನ ಕೆಲಸದಲ್ಲಿ ಬೆಳಕಿನ ಸಂಗವಿಲ್ಲದೆ ಇರುವುದೇ ಇಲ್ಲ. ನನ್ನ ಸುತ್ತಮುತ್ತಲಿನ ಪರಿಸರದಲ್ಲಿ ಪ್ರೀತಿ, ಶಾಂತಿ ಹಾಗೂ ಸೌಹಾರ್ದತೆಯನ್ನು ಸಾಕ್ಷಾತ್ತಾಗಿ ಕಾಣುತ್ತೇನೆ. ಪ್ರೀತಿ ಎಂಬುದು ಕಣ್ಣಿಗೆ ಕಾಣದ ಬೆಳಕಿನ ತರಂಗ ಎಂದು ನಂಬುತ್ತೇನೆ.

ಧ್ಯಾನ ಮಾಡುವುದರಿಂದ ನನ್ನಲ್ಲಿದ್ದ ತಲೆನೋವು ಕಡಿಮೆಯಾಗಿದೆ. ನನ್ನೆಲ್ಲ ಯೋಚನೆಗಳೂ ಶಾಂತಿಯುತವಾಗಿವೆ ಹಾಗೂ ನಾನು ಸೌಹಾರ್ದತೆಯನ್ನು ಪ್ರಜ್ಞಾಪೂರ್ವಕವಾಗಿ ಅಳವಡಿಸಿಕೊಂಡಿದ್ದೇನೆ.

– ಲ್ಯೂಸಿಂಡಾ ಬಾಕ್

ನಾನು ಋಷಿಗಳ ಕುಟುಂಬದೊಂದಿಗೆ ಹಾಗೂ ಸೂಕ್ಷ್ಮ ಪ್ರಪಂಚದೊಂದಿಗೆ ಸಂಬಂಧಿಸಿದವಳಾಗಿದ್ದೇನೆ ಎಂದು ಬಲವಾಗಿ ಅನಿಸುತ್ತದೆ. ನನ್ನನ್ನು ಅವರು ಸಂಪೂರ್ಣವಾಗಿ ಸೆಳೆದುಕೊಂಡಂತೆನಿಸುತ್ತದೆ.

ನನ್ನ ಪ್ರತಿನಿತ್ಯದ ಧ್ಯಾನದಿಂದಾಗಿ, ದಿನಪೂರ್ತಿ ಕೆಲಸ ಕಾರ್ಯಗಳನ್ನು ಸುಗಮವಾಗಿ ನಿರ್ವಹಿಸಲು ಸಾಧ್ಯವಾಗಿದೆ. ನನ್ನ ಸುತ್ತಮುತ್ತಲೂ ಇರುವ ನಕಾರಾತ್ಮಕ ಜನರಿಂದ ನನಗೆ ಕಿರಿಕಿರಿ ಎನಿಸುವುದಿಲ್ಲ. ಎಲ್ಲಾ ವಿಷಯಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಲು ಸಾಧ್ಯವಾಗಿದೆ.

– ವಸಂತ ರಾಮಾನುಜನ್

ನನ್ನ ಜೀವನ ಸಂತೋಷ ಹಾಗೂ ತೃಪ್ತಿಯಿಂದಿದ್ದು ಅತ್ಯಂತ ಸುಂದರವಾಗಿದೆ. ನಾನು ಬೇಡದ ಕೆಲಸದಲ್ಲಾಗಲೀ ಸಂಭಾಷಣೆಯಲ್ಲಾಗಲೀ ತೊಡಗುವುದಿಲ್ಲ. ನನ್ನ ಆರೋಗ್ಯ ಸುಧಾರಿಸಿದೆ. ಈಗ ನನಗೆ ಚಿಂತೆ, ಒತ್ತಡ ಹಾಗೂ ಹತಾಶೆ ಎಂಬ ಪದಗಳು ಪರಕೀಯ ಪದಗಳೆಂದೆನಿಸುತ್ತವೆ. ನನ್ನೊಳಗೆ ಹಾಗೂ ನನ್ನ ಸುತ್ತ ಮುತ್ತ ಅಪಾರವಾದ ಪ್ರೀತಿ ಹಾಗೂ ಸಂತೋಷವಿದೆ. ನನ್ನ ಮಗ ಅಮೆರಿಕಾಗೆ ಹೊರಟಾಗ ನಗುಮುಖದಿಂದ ಅವನನ್ನು ಬೀಳ್ಕೊಟ್ಟೆ. ವೈರಾಗ್ಯದ ಅಭ್ಯಾಸ ನನಗೆ ಸುಲಭವಾಗಿದೆ. ನನ್ನ ಜೀವನದ ಪ್ರತಿ ಕ್ಷಣಗಳನ್ನೂ ಆನಂದಿಸುತ್ತೇನೆ.

– ಪಾಯಲ್ ವರ್ಮಾ

ನನ್ನ ಇಷ್ಟದಂತೆ ಕೆಲಸಗಳಾಗುತ್ತಿಲ್ಲವಾದರೂ, ನನಗೆ ದೇವರಲ್ಲಿ ನಂಬಿಕೆ ಕಡಿಮೆಯಾಗಿಲ್ಲ. "ನನಗೆ ಹಾಗೂ ನನ್ನ ಕುಟುಂಬಕ್ಕೆ ಏನು ಬೇಕೆಂದು ದೇವರಿಗೆ ಗೊತ್ತು. ಅವನು ನಮ್ಮನ್ನು ಅತ್ಯುತ್ತಮ ರೀತಿಯಲ್ಲಿ ಕಾಪಾಡುತ್ತಾನೆ," ಎಂದು ನನಗೆ ನಾನೇ ಹೇಳಿಕೊಳ್ಳುತ್ತಿರುತ್ತೇನೆ. ಇದೊಂದು ದೊಡ್ಡ ಸಾಧನೆಯೆಂದು ನನಗನ್ನಿಸುತ್ತದೆ.

– ಅನು ಸೆಹಗಾಲ್

ನಾನು ಯಾವಾಗಲೂ ಬೆಳಕಿನ ಬಗ್ಗೆ ಯೋಚಿಸುತ್ತಿರುತ್ತೇನೆ ಮತ್ತು ಗುರೂಜಿಯವರ ಮಾತುಗಳನ್ನು ಕೇಳುತ್ತಿರುತ್ತೇನೆ. ಬಹುತೇಕ ಸಮಯ ನಾನು ಶಾಂತಿಯಿಂದಿರುತ್ತೇನೆ. ಋಷಿಗಳ ಕೃಪೆಯ ಅನುಭವ ನನಗಾಗುತ್ತದೆ. ಶರಣಾಗತಿಯ ಭಾವದಲ್ಲಿ ಸನ್ನಿವೇಶಗಳನ್ನು ಒಪ್ಪಿಕೊಳ್ಳುವುದನ್ನು ಕಲಿತಿದ್ದೇನೆ.

– ಉತ್ಕರ್ಷ ಮಲ್ಕರ್

ಭಾನುವಾರದ ತರಗತಿಗಳಿಗಾಗಿ ನಾನು ಕಾತುರದಿಂದ ಕಾಯುತ್ತಿರುತ್ತೇನೆ. ಗುರೂಜಿಯವರ ಇರುವಿಕೆಯ ಅನುಭವ ಯಾವಾಗಲೂ ಆಗುತ್ತದೆ. ಜಯಂತ್‌ಜಿ ಮತ್ತು ಇತರರ ಘನಗಾಂಭೀರ್ಯ ಮತ್ತು ಪ್ರಶಾಂತತೆ ನನಗೆ ಸ್ಫೂರ್ತಿ ನೀಡುತ್ತದೆ.

– ಆರ್. ದೀಪ್ತಿ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ